# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 424 |
| ಸದಸ್ಯರ ಹೆಸರು | : | ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 30.01.2026. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ಗ್ರಾಮ ಪಂಚಾಯಿತಿಗಳ ಸಂಖ್ಯೆ ಎಷ್ಟು; ಸದರಿ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗಳು ಸದಸ್ಯರುಗಳು ಪಂಚಾಯಿತಿಗಳಲ್ಲಿ ಹಾಗೂ ಅಧ್ಯಕ್ಷರು ಹಣ ದುರ್ಬಳಕೆ ಮಾಡಿ ಸರ್ಕಾರಕ್ಕೆ ವಂಚಿಸಿದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; (ಗ್ರಾಮ ಪಂಚಾಯಿತಿವಾರು ಪ್ರಕರಣವಾರು ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ 5947 ಗ್ರಾಮ ಪಂಚಾಯಿತಿಗಳಿದ್ದು, ಈ ಪಂಚಾಯತಿಗಳ ಪೈಕಿ ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳು ಹಣ ದುರ್ಬಳಕೆ ಮಾಡಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಕ್ರಮ ವಹಿಸಿದ್ದು, ಕೆಲವು ಪ್ರಕರಣಗಳು ಪರಿಶೀಲನಾ ಹಂತದಲ್ಲಿರುತ್ತವೆ.<br><br>ಗ್ರಾಮ ಪಂಚಾಯಿತಿವಾರು ಮತ್ತು ಪ್ರಕರಣವಾರು ಸಂಪೂರ್ಣ ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ. |
| (ಆ) | ಕಳೆದ 3 ವರ್ಷಗಳಲ್ಲಿ ಅವ್ಯವಹಾರವಾಗಿರುವ ಗ್ರಾಮ ಪಂಚಾಯಿತಿಗಳನ್ನು ತನಿಖೆಗೆ ಒಳಪಡಿಸಿರುವ ಒಟ್ಟು ಪ್ರಕರಣಗಳು ಎಷ್ಟು; ಅದಕ್ಕೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು: ಗ್ರಾಮ ಪಂಚಾಯಿತಿವಾರು ಮಾಹಿತಿ ನೀಡುವುದು) | |
| (ಇ) | ಪ್ರಸ್ತುತ ತನಿಖೆ ಪೂರ್ಣಗೊಂಡು ಆದೇಶಕ್ಕಾಗಿ ಬಾಕಿ ಇರುವ ಪ್ರಕರಣಗಳು ಎಷ್ಟು; ಯಾವ ಕಾರಣಕ್ಕಾಗಿ ಬಾಕಿ ಉಳಿಸಿಕೊಳ್ಳಲಾಗಿದೆ; ಹಾಗೂ ಅವ್ಯವಹಾರದಿಂದ ಸರ್ಕಾರಕ್ಕೆ ಆದ ಒಟ್ಟು ನಷ್ಟ ಎಷ್ಟು? (ಗ್ರಾಮ ಪಂಚಾಯಿತಿವಾರು ಮಾಹಿತಿ ನೀಡುವುದು) | |

| | | |
|---|---|---|
| (ಉ) | ಗ್ರಾಮ ಪಂಚಾಯಿತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸದಸ್ಯರುಗಳು ಹಾಗೂ ಅಧ್ಯಕ್ಷರುಗಳು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಭಿನಿಯಮ 1993 ರ ಪ್ರಕರಣದ 43(ಎ)(i), ರನ್ವಯ ತನಿಖೆ ಮೂಲಕ ಸಾಬೀತಾದರೂ ಸಹ ಸರ್ಕಾರ ಕ್ರಮ ಕೈಗೊಳ್ಳದೆ ಇರಲು ಕಾರಣಗಳೇನು; | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ(1 )(i) ರಲ್ಲಿ ಆತನು ತನ್ನ ಕರ್ತವ್ಯಗಳನ್ನು ನಿರ್ವಹಿಸುವಾಗ ದುರ್ನಡತೆಯ ಅಥವಾ ತಲೆತಗ್ಗಿಸುವಂತಹ ನಡತೆಯ ತಪ್ಪಿತಸ್ಥನಾಗಿದ್ದಾನೆಂದು ಕಂಡುಬಂದರೆ ಗ್ರಾಮ ಪಂಚಾಯತಿ ಸದಸ್ಯರ ವಿರುದ್ಧ ಕ್ರಮ ಕೈಗೊಳ್ಳಲು ಅವಕಾಶವಿದೆ.<br><br>ಮೇಲ್ಕಂಡಂತೆ ಕ್ರಮ ಕೈಗೊಳ್ಳುವ ಪೂರ್ವದಲ್ಲಿ ಸಮಗ್ರ ವಿಚಾರಣೆ ನಡೆಸಬೇಕಾಗಿದೆ. ಕೆಳ ಹಂತದಿಂದ ವಿಚಾರಣೆ ನಡೆದ ನಂತರವೂ ಸರ್ಕಾರದಿಂದ ಅವರ ಹೇಳಿಕೆಗಳನ್ನು ಪಡೆದು ವಿಚಾರಣೆ ನಡೆಸುವುದು ನೈಸರ್ಗಿಕ ನ್ಯಾಯ ತತ್ವದಡಿ ಅವಶ್ಯಕವಾಗಿದೆ. ಈ ಎಲ್ಲಾ ಪ್ರಕ್ರಿಯೆಗಳು ಮುಗಿದ ನಂತರ ಗ್ರಾಮ ಪಂಚಾಯಿತಿ ಸದಸ್ಯರನ್ನು ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಲು ಕ್ರಮ ಕೈಗೊಳ್ಳಬೇಕಾಗುತ್ತದೆ. |
| (ಊ) | ಈ ಅಧಿನಿಯಮದನ್ವಯ ತನಿಖೆ ಮೂಲಕ ಸಾಬೀತಾದರು ಸಹ ಕಾನೂನು ಕ್ರಮಗಳನ್ನು ಜರುಗಿಸಲು ಸರ್ಕಾರವು 3-4 ವರ್ಷ ಸಮಯ ತೆಗೆದುಕೊಳ್ಳುತ್ತಿರುವುದರಿಂದ ಸರ್ಕಾರಕ್ಕೆ ನಷ್ಟವಾಗುತ್ತಿಲ್ಲವೇ; ಹಾಗಿದ್ದಲ್ಲಿ ಸರ್ಕಾರದ ಕ್ರಮವೇನು: ಈ ಸಂಬಂಧ ಸರ್ಕಾರವು ನೂತನ ಕಾನೂನು ಜಾರಿಗೊಳಿಸುವುದೇ? | ಕೆಳಹಂತದ ತನಿಖಾ ವರದಿಯನ್ನಾಧರಿಸಿ, ಆರೋಪ ಸಾಬೀತಾಗಿ, ವರದಿ ಬಂದ ನಂತರವೂ ಸರ್ಕಾರದ ಹಂತದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43 (ಎ) ರಡಿ ವಿಚಾರಣೆ ನಡೆಸಲು ಹಾಗೂ ಆರೋಪಿತರಿಗೆ ಹೇಳಿಕೆ ನೀಡಲು ಅವಕಾಶ ಕಲ್ಪಿಸಬೇಕಾಗಿದೆ. ಈ ಹಂತದಲ್ಲಿ ಆರೋಪಗಳು ಹಾಗೂ ಆರೋಪಿತರು ಸಲ್ಲಿಸುವ ಪ್ರತಿ ಹೇಳಿಕೆಗಳನ್ನು ನಿಯಮಾನುಸಾರ ವಿಚಾರಣೆ ಮಾಡಲು ಕಾಲಾವಕಾಶ ನೀಡುವುದು ಕಾನೂನು ರೀತಿ ಅನಿವಾರ್ಯವಾಗಿರುತ್ತದೆ. ಈ ಹಂತದಲ್ಲಿ ಸ್ವಲ್ಪ ಹೆಚ್ಚಿನ ಕಾಲಾವಕಾಶ ಬೇಕಾಗಿದೆ. ಇದು ಉದ್ದೇಶ ಪೂರ್ವಕವಾದ ವಿಳಂಬವಾಗಿರುವುದಿಲ್ಲ. |

ಸಂಖ್ಯೆ: ಗ್ರಾಅಪ 108 ಗ್ರಾಪಂಅ 2026

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

**ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 424 ಕ್ಕೆ ಅನುಬಂಧ**

**ಕಳೆದ ಮೂರು ವರ್ಷಗಳಲ್ಲಿ ಅವ್ಯವಹಾರವಾಗಿರುವ ಗ್ರಾಮ ಪಂಚಾಯತಿಗಳ ವಿವರ**

| ಕ್ರ.ಸಂ | ಜಿಲ್ಲೆ | ತಾಲ್ಲೂಕು | ಗ್ರಾಮ | PDO/ ಚುನಾಯಿತ ಪ್ರತಿನಿಧಿಗಳು | ಪ್ರಕರಣದ ವಿವರ | ಕೈಗೊಂಡಿರುವ ಕ್ರಮ | ಷರಾ |
|---|---|---|---|---|---|---|---|
| 1. | ಚಿತ್ರದುರ್ಗ | ಚಳ್ಳಕೆರೆ | ನಗರಂಗೆರೆ | ಶ್ರೀಮತಿ ಗಂಗಮ್ಮ, ಅಧ್ಯಕ್ಷರು, ನಗರಂಗೆರೆ ಗ್ರಾಮ ಪಂಚಾಯಿತಿ. | ಅನುಮೋದನೆ ಇಲ್ಲದೆ ಹೆಚ್ಚುವರಿ ಮೊತ್ತವನ್ನು ದುರಪಯೋಗ ಪಡಿಸಿಕೊಂಡಿರುವ ಆರೋಪ | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 48(4) ಮತ್ತು 48(5) ರನ್ವಯ ನಗರಂಗೆರೆ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಸ್ಥಾನದಿಂದ ಹಾಗೂ ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಿದೆ. | - |
| | | ಹಿರಿಯೂರು | ಕಣಜಹಳ್ಳಿ | ಶ್ರೀ ಚಿದಾನಂದ ಸ್ವಾಮಿ ಆರ್. ಅಧ್ಯಕ್ಷರು, ಕಣಜಹಳ್ಳಿ, ಗ್ರಾಮ ಪಂಚಾಯಿತಿ. | ಅನುದಾನ ದುರುಪಯೋಗ ಪಡಿಸಿಕೊಂಡಿರುವ ಆರೋಪ. | ಮೇಲೆ ತಿಳಿಸಿರುವಂತೆ ಅಧಿನಿಯಮ, 1993ರ ಪ್ರಕರಣ 43(ಎ)(vi) ರಡಿ ರನ್ವಯ 06 ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಿದೆ. | |

| | | | | | | | |
|---|---|---|---|---|---|---|---|
| | | ಹೊಸದುರ್ಗ | ಜಾನಕಲ್ | ಶ್ರೀ ಶ್ರೀನಿವಾಸ ಅಧಿಕಾರಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ | ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವುದು. | ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂದ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ, 14-ಎ ರಡಿ ಮಾನ್ಯ ಲೋಕಾಯುಕ್ತರಿಗೆ ವಹಿಸಲಾಗಿದೆ. | |
| | | ಚಿತ್ರದುರ್ಗ | ಸೊಂಡೇ ಕೋಳ | ಶ್ರೀಮತಿ ದೇವಮ್ಮ, ಅಧ್ಯಕ್ಷರು. | ಹಣಕಾಸಿನ ಅವ್ಯವಹಾರ ನಡೆಸಿರುವ ಆರೋಪ. | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ) ಮತ್ತು 48(4) ಮತ್ತು 48(5)ರನ್ವಯ ರನ್ವಯ ಸೊಂಡೇಕೋಳ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಸ್ಥಾನದಿಂದ ಹಾಗೂ ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಿದೆ. | |
| | | ಹಿರಿಯೂರು | ಕಣಜನಹಳ್ಳಿ | ಶ್ರೀಮತಿ ಕೆ ಮಂಜುಳ, ಸದಸ್ಯರು | 15ನೇ ಹಣಕಾಸು ಯೋಜನೆಯಡಿಯಲ್ಲಿ ಕಾಮಗಾರಿ ಕೈಗೊಂಡು ಬಿಲ್ ಪಾವತಿ ಮಾಡಿಕೊಂಡಿರುವ ಆರೋಪ. | ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ಇವರಿಗೆ ವಿಚಾರಣೆ ನಡೆಸಿ ವರದಿ ನೀಡುವಂತೆ ಪತ್ರ ಬರೆಯಲಾಗಿದೆ. | |
| | | ಹಿರಿಯೂರು | ಮೇಟಿಕುರ್ಕಿ | ಶ್ರೀಮತಿ ನಾಗಲಕ್ಷ್ಮಿ, ಆರ್ ಅಧ್ಯಕ್ಷರು | 14ನೇ ಹಣಕಾಸು ಯೋಜನೆಯಡಿ ಹಣ ದುರ್ಬಳಕೆ ಮಾಡಿಕೊಂಡಿರುವ | ಕ.ಗ್ರಾ.ಸ್ವ ಮತ್ತು ಪಂ.ರಾಜ್ ಅಧಿನಿಯಮ, 1993ರ ಪ್ರಕರಣ | ಸದರಿ ಆದೇಶವನ್ನು ಪ್ರಶ್ನಿಸಿ ರಿಟ್ ಅರ್ಜಿ ಸಂಖ್ಯೆ:23762/2025ನ್ನು ದಾಖಲಿಸಿರುತ್ತಾರೆ. |

| | | | | | | | |
|---|---|---|---|---|---|---|---|
| | | | | ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ. | ಆರೋಪ. | 43(ಎ) ಮತ್ತು 43(ಎ)(2) ರನ್ವಯ 06 ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿದೆ. | |
| 2. | ವಿಜಯಪುರ | ಸಿಂಧಗಿ | ಹರನಾಳ | ಶ್ರೀ ಕೆ.ಬಿ. ಶಿವಣಗಿ ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಇತರರು. | 2010-11ರಿಂದ 2014-15ನೇ ಸಾಲಿನಲ್ಲಿ MGNREGA ಯೋಜನೆಯಡಿ ಅನುದಾನ ದುರ್ಬಳಕೆ ಮಾಡಿಕೊಂಡಿರುವ ಆರೋಪ. | ಸದರಿ ಆರೋಪದ ಕುರಿತು ಪರಿಶೀಲಿಸಿ ವರದಿ ನೀಡುವಂತೆ ಮು.ಕಾ.ನಿ.ಅ. ಜಿಲ್ಲಾ ಪಂಚಾಯಿತಿ ಇವರಿಗೆ ಪತ್ರ ಬರೆಯಲಾಗಿದೆ. | |
| | | ಇಂಡಿ | ಆಲೂರು | ಶ್ರೀ ಎಲ್. ವಿ ಜಿದ್ದಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ | ಅನುದಾನ ದುರುಪಯೋಗ | ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ, 1957ರ ನಿಯಮ, 214(1)(ಬಿ) ರನ್ವಯ ದಂಡನ ವಿಧಿಸಿದೆ. | |
| | | ಇಂಡಿ | ದೇವರ ನಿಂಬರಗಿ | ಶ್ರೀ ಎಸ್.ಹೆಚ್. ಶೀನಖೇಡ್. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ | ಹಣ ದುರುಪಯೋಗ ಮಾಡಿರುವ ಆರೋಪ. | ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ, 14-ರಡಿ ಮಾನ್ಯ ಲೋಕಾಯುಕ್ತರಿಗೆ ವಹಿಸಲಾಗಿದೆ. | |
| | | ವಿಜಯಪುರ | ಜಾಲಗೇರಿ | ಶ್ರೀ ಚಲವಾದಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಇತರರು. | ಇಂದಿರಾ ಅವಾಜ್ ಯೋಜನೆಯಡಿ ಅವ್ಯವಹಾರದ ಕುರಿತು. | ಸದರಿ ಪ್ರಕರಣದ ಕುರಿತು ವರದಿ ನೀಡುವಂತೆ ಮು.ಕಾ.ನಿ.ಅ ರವರಿಗೆ ಪತ್ರ ಬರೆಯಲಾಗಿದೆ. | |

| | | | | | | | |
|---|---|---|---|---|---|---|---|
| | | ಇಂಡಿ | ಹಂಜಗಿ | ಶ್ರೀ ವೀರೇಶ್ ಸುಭಾಶ್ಚಂದ್ರ ಹಿಟ್ಟಿನಹಳ್ಳಿ | ಬಸವ ಯೋಜನೆಯಡಿ ಅವ್ಯವಹಾರದ ಕುರಿತು. | ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂದ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ, 14-ರಡಿ ಮಾನ್ಯ ಲೋಕಾಯುಕ್ತರಿಗೆ ವಹಿಸಲಾಗಿದೆ. | |
| | | ವಿಜಯಪುರ | ಮಡಬಾವಿ | ಶ್ರೀ ಮತಿ ಲಲಿತಬಾಯಿ ಎನ್.ಕೋಟಿ. | ಹಣ ದುರುಪಯೋಗ ಪ್ರಕರಣ. | ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ, 1957ರ ನಿಯಮ, 214(1)(ಬಿ) ರನ್ವಯ ದಂಡನೆ ವಿಧಿಸಿದೆ. | |
| | | ವಿಜಯಪುರ | ಕನ್ನೂರು | ಪಿಡಿಓ, ಶ್ರೀ ರಾಜೇಶ್ ಗಾಯಕವಾಡ ಮತ್ತು ಅಧ್ಯಕ್ಷರು, ಶ್ರೀ ಹಾಜಿಮಲ್ಲಿಕ್ ಅಮೀನ ಸಾಬಾ ಬಾಲೇಬಾಯಿ | ಬಸವ ವಸತಿ ಯೋಜನೆಯಡಿ ಆರೋಪದ ಕುರಿತು. | ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂದ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ, 14-ರಡಿ ಮಾನ್ಯ ಲೋಕಾಯುಕ್ತರಿಗೆ ವಹಿಸಲಾಗಿದೆ. | |
| | | ಆಲಮೇಲ | ಕಕ್ಕಳಮೇಲಿ | ಅಧ್ಯಕ್ಷರು, ಶ್ರೀಮತಿ ಸುನೀತಾ ಉಮೇಶ್ ರಾಠೋಡ, | ಹಣ ಕಾಸಿನ ದುರುಪಯೋಗ | ಅಭಿಯೋಜನ ಒಳಪಡಿಸಲು ಅಭಿಯೋಜನಾ ಮಂಜೂರಾತಿ ನೀಡಿ ಆದೇಶಿಸಿದೆ. | |
| | | ಮುದ್ದೇಬಿಹಾಳ | ಯಾರಝುರಿ | ಶ್ರೀ ವಿಜಯ ಅ ಮುದಗಲ್ಲ, | ಹಣ ಕಾಸಿನ ದುರುಪಯೋಗ | ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂದ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ, | |

| | | | | | | | |
|---|---|---|---|---|---|---|---|
| | | | | | | 14-ರಡಿ ಮಾನ್ಯ ಲೋಕಾಯುಕ್ತರಿಗೆ ವಹಿಸಲಾಗಿದೆ. | |
| | | ಇಂಡಿ | ಹತ್ತಳ್ಳಿ | ಶ್ರೀ ಬಿ.ಜಿ ರಾಥೋಡ, ಪಿಡಿಓ, | ಬಸವ ವಸತಿ ಯೋಜನೆಯಡಿ ಆರೋಪದ ಕುರಿತು | ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂದ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ, 14-ರಡಿ ಮಾನ್ಯ ಲೋಕಾಯುಕ್ತರಿಗೆ ವಹಿಸಲಾಗಿದೆ. | |
| | | ವಿಜಯಪುರ | ಗುಣಕಿ | ಶ್ರೀ ಎಂ.ಎಸ್. ಮಠ, ಪಂ.ಅ.ಅ. | MGNREGA ಯೋಜನೆಯಡಿಯಲ್ಲಿ ಕಾಮಗಾರಿ ದುರ್ಬಳಕೆ ಮಾಡಿಕೊಂಡಿರುವ ಆರೋಪ. | ಕರ್ನಾಟಕ ಲೋಕಾಯುಕ್ತ ಕಾಯ್ದೆ, ಕಲಂ 12(1)ರಡಿ ಶಿಫಾರಸ್ಸು ಮಾಡಲಾಗಿದೆ. | |
| | | ವಿಜಯಪುರ | ಜಾಲಗೇರಿ | ಶ್ರೀ ವಿ.ಎಸ್. ನಾಯಕ್ ಪಂ.ಅ.ಅ. ಮತ್ತು ಇತರರು. | ಇಂದಿರಾ ಅವಾಜ್ ಯೋಜನೆಯಡಿ ಆರೋಪದ ಕುರಿತು. | ಮೂರು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತ ತಡೆಹಿಡಿದು ಆದೇಶ ಹೊರಡಿಸಲಾಗಿದೆ. | |
| | | ಚಡಚಣ | ಸೀನಕೇಡ | ಶ್ರೀ ಎಸ್.ಹೆಚ್ ಶೀನಖೇಡ ಪಂ.ಅ.ಅ. | 15ನೇ ಹಣಕಾಸು ಯೋಜನೆಯಡಿಯಲ್ಲಿ ಹಣ ದುರುಪಯೋಗ. | ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂದ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ, 14-ರಡಿ ಮಾನ್ಯ ಲೋಕಾಯುಕ್ತರಿಗೆ ವಹಿಸಲಾಗಿದೆ. | ಸದರಿ ಆದೇಶವನ್ನು ಪ್ರಶ್ನಿಸಿ, ಮಾನ್ಯ ಕೆ.ಎ.ಟಿ ಕಲಬುರಗಿ ಪೀಠ ಅರ್ಜಿ ಸಂಖ್ಯೆ:20163/2023 ನ್ನು ದಾಖಲಿಸಿರುತ್ತಾರೆ. |
| | | ವಿಜಯಪುರ | ಕಾಖಂಡಿ | ಶ್ರೀಮತಿ ಇಂದಿರಾಬಾ | ಹಣ ದುರುಪಯೋಗ ಪಡಿಸಿಕೊಂಡಿರುವುದು. | ಕ.ಗ್ರಾ.ಸ್ವ ಮತ್ತು ಪಂ.ರಾಜ್ | ಸದರಿ ಆದೇಶವನ್ನು ಪ್ರಶ್ನಿಸಿ ರಿಟ್ ಅರ್ಜಿ |

| | | | | | | | |
|---|---|---|---|---|---|---|---|
| | | | | ಯಿ, ಪಂ.ಅ.ಅ | | ಅಧಿನಿಯಮ, 1993ರ ಪ್ರಕರಣ 43(ಎ)ರಡಿ ಕ್ರಮ ಜರುಗಿಸಲಾಗಿದೆ. | ಸಂಖ್ಯೆ:226116/2020 ನ್ನು ದಾಖಲಿಸಿರುತ್ತಾರೆ. |
| | | ಚಡಚಣ | ಚಿಕ್ಕಬೆನೂರು | ಶ್ರೀ ದಾನಯ್ಯ ಕರ್ಜಗಿ, ಪಂ.ಅ.ಅ. | ಬಸವ ವಸತಿ ಯೋಜನೆಯಡಿಯಲ್ಲಿ ಅವ್ಯವಹಾರದ ಕುರಿತು. | ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂದ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ, 14-ರಡಿ ಮಾನ್ಯ ಲೋಕಾಯುಕ್ತರಿಗೆ ವಹಿಸಲಾಗಿದೆ | ಸದರಿ ಆದೇಶವನ್ನು ಪ್ರಶ್ನಿಸಿ ಮಾನ್ಯ ಕೆ.ಎ.ಟಿ ಕಲಬುರಗಿ ಪೀಠ ಅರ್ಜಿ ಸಂಖ್ಯೆ:20534/2024 ನ್ನು ದಾಖಲಿಸಿರುತ್ತಾರೆ. |
| | | ಕೋಲಾರ | ಹನುಮಾಪುರ | ಶ್ರೀ ಅಲ್ಲಮ ಪ್ರಭು ಅಗಸರ ಪಂ.ಅ.ಅ. | ಹಣ ದುರುಪಯೋಗ ಆರೋಪ. | ಸದರಿ ಆದೇಶವನ್ನು ಪ್ರಶ್ನಿಸಿ, ರಿಟ್ ಅರ್ಜಿ ಸಂಖ್ಯೆ:2001412/ 2022ನ್ನು ದಾಖಲಿಸಿರುತ್ತಾರೆ. | |
| | | ಇಂಡಿ | ತಾಂಬಾ | ಶ್ರೀಮತಿ ಶಾಂತಾಬಾಯಿ ಎಂ. ಬಂಡಿವಾಳ | ಹಣ ದುರುಪಯೋಗದ ಕುರಿತು. | ಮು.ಕಾ.ನಿ. ವಿಜಯಪುರ ಜಿಲ್ಲೆ ಇವರು ಹಣ ಹಿಂಪಡೆಯಲು ಪತ್ರ ಬರೆಯಲಾಗಿದೆ. | |
| | | ಇಂಡಿ | ಚಡಚಣ | ಶ್ರೀ ಸುರೇಶ್ ಪಿ ಸಿಂಗೆ, ಪಂ.ಅ.ಅ ಮತ್ತು ಶ್ರೀ ರಾಮಗೊಂಡಪ್ಪ ಬಾಪುರಾಯ ಬಿರಾದಾರ | MGNREGA ಯೋಜನೆಯಡಿಯಲ್ಲಿ ಕಾಮಗಾರಿ ದುರ್ಬಳಕೆ ಮಾಡಿಕೊಂಡಿರುವ ಆರೋಪ. | ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂದ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ, 14-ರಡಿ ಮಾನ್ಯ ಲೋಕಾಯುಕ್ತರಿಗೆ ವಹಿಸಲು ಕ್ರಮ ವಹಿಸಲಾಗುತ್ತಿದೆ. | |
| | | ಬಸವನ ಬಾಗೇವಾಡಿ | ಉಕ್ಕಳಿ | ಶ್ರೀ ಬಿಳಿ ಕುದರಿ ಡಿ.ಎಂ. | 2011-12 ಮತ್ತು 2013-14ನೇ ಸಾಲಿನ ವಸತಿ | ಮೂರು ವಾರ್ಷಿಕ ವೇತನ ಬಡ್ತಿಗಳನ್ನು | ಸದರಿ ಆದೇಶವನ್ನು ಪ್ರಶ್ನಿಸಿ ಮಾನ್ಯ |

| | | | | | | | |
|---|---|---|---|---|---|---|---|
| | | | | | ಯೋಜನೆ ಹಾಗೂ ನರೇಗಾ ಕಾಮಗಾರಿಗಳ ಅವ್ಯವಹಾರದ ಕುರಿತು. | ತಡೆ ಹಿಡಿಯುವ ದಂಡನೆ ವಿಧಿಸಿದೆ. | ಕೆ.ಎ.ಟಿ ಕಲಬುರಗಿ ಪೀಠ ಇಲ್ಲಿ ಅರ್ಜಿ ಸಂಖ್ಯೆ:20325/2025 ನ್ನು ದಾಖಲಿಸಿರುತ್ತಾರೆ. |
| 3. | ಗದಗ | ಮುಂಡರಗಿ | ಕೊರ್ಲಹಳ್ಳಿ | ಶ್ರೀ ಫಕ್ರುದ್ದೀನ್ ನದಾಫ, ಪಂ.ಅ.ಅ. | ಗ್ರಾಮ ವಿಕಾಸ ಯೋಜನೆಯಡಿ ಬಿಡುಗಡೆಗೊಂಡ ಅನುದಾನವನ್ನು ದುರುಪಯೋಗ ಪಡಿಸಿಕೊಂಡಿರುವ ಆರೋಪ. | ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂದ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ, 14-ರಡಿ ಮಾನ್ಯ ಲೋಕಾಯುಕ್ತರಿಗೆ ವಹಿಸಿ ಆದೇಶಿಸಿದೆ. | ಸದರಿ ಆದೇಶವನ್ನು ಪ್ರಶ್ನಿಸಿ ಮಾನ್ಯ ಕೆ.ಎ.ಟಿ ಬೆಳಗಾವಿ ಪೀಠ ಇಲ್ಲಿ ಅರ್ಜಿ ಸಂಖ್ಯೆ:12365/2024 ನ್ನು ದಾಖಲಿಸಿರುತ್ತಾರೆ. |
| | | ಗದಗ | ಚಿಂಚಲಿ | ಶ್ರೀಮತಿ ದೀಪ ಬಾಯಿ ಕುಲಕರ್ಣಿ, ಅಧ್ಯಕ್ಷರು, | 2017-18ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಎನ್ .ಎಂ.ಆರ್. ನಲ್ಲಿ ಹಣ ದುರುಪಯೋಗ ಪಡಿಸಿಕೊಂಡಿರುವ ಆರೋಪ. | ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ಇವರಿಗೆ ವಿಚಾರಣೆ ಮಾಡಿ ವರದಿ ನೀಡುವಂತೆ ಪತ್ರ ಬರೆಯಲಾಗಿದೆ. | |
| | | ಗದಗ | ನಾಗಾವಿ | ಶ್ರೀ ಬಿ.ಎಸ್ ಬಚ್ಚೇನಹಳ್ಳಿ, ಪಂ.ಅ.ಅ | MGNREGA ಯೋಜನೆಯಡಿಯಲ್ಲಿ, ಹಣ ದುರ್ಬಳಕೆ ಮಾಡಿಕೊಂಡಿರುವ ಆರೋಪ. | ಮೂರು ವಾರ್ಷಿಕ ವೇತನ ಬಡ್ತಿಗಳನ್ನು ತಡೆ ಹಿಡಿದು ದಂಡನೆ ವಿಧಿಸಿದೆ. | ಸದರಿ ಆದೇಶವನ್ನು ಪ್ರಶ್ನಿಸಿ, ಮಾನ್ಯ ಕೆ.ಎ.ಟಿ ಬೆಳಗಾವಿ ಇಲ್ಲಿ ದಾಖಲಿಸಿದ್ದ ಅರ್ಜಿ ಸಂಖ್ಯೆ:13475/2024 ನ್ನು ದಾಖಲಿಸಿರುತ್ತಾರೆ. |

| | | | | | | | |
|---|---|---|---|---|---|---|---|
| | | ರೋಣಾ | ಕುರಡಗಿ | ಶ್ರೀಮತಿ ಶಿಲ್ಪ ಪಂ.ಅ.ಅ. | MGNREGA ಯೋಜನೆಯಡಿಯಲ್ಲಿ ಹಣ ದುರ್ಬಳಕೆ ಮಾಡಿಕೊಂಡಿರುವ ಆರೋಪ. | ನಾಲ್ಕು ವರ್ಷಗಳ ಕಾಲ ತಡೆಹಿಡಿದು ದಂಡನೆ ವಿಧಿಸಿ ಆದೇಶಿಸಿದೆ. | ಸದರಿ ಆದೇಶವನ್ನು ಪ್ರಶ್ನಿಸಿ, ಮಾನ್ಯ ಕೆ.ಎ.ಟಿ ಬೆಳಗಾವಿ ಇಲ್ಲಿ ದಾಖಲಿಸಿದ್ದ ಅರ್ಜಿ ಸಂಖ್ಯೆ:10786/2024 ನ್ನು ದಾಖಲಿಸಿರುತ್ತಾರೆ. |
| 4. | ಧಾರವಾಡ | ನವಲಗುಂದ , ಕಲಘಟಗಿ, ಅಣ್ಣೀಗೇರಿ. | ನಾವಳ್ಳಿ , ಮಿಶ್ರಿಕೋಟಿ, ಸಾಸಿವೇಹಳ್ಳಿ | ಶ್ರೀ ಎ.ಐ. ಸೈಯದ್, ಪಂ.ಅ.ಅ, ಶ್ರೀ ಆರ್.ಎಸ್ ಹಿರೇಗೌಡ್ರು ಪಂ.ಅ.ಅ. ಶ್ರೀ ನಾರಾಯಣರಡ್ಡಿ ರಿತ್ತಿ, ಪಂ.ಅ.ಅ. | 14ನೇ ಹಣಕಾಸು ಮತ್ತು ಪ್ರವರ್ಗ -1 ಹಾಗೂ ಇನ್ನಿತರೆ ಯೋಜನೆಗಳಡಿ ಮಂಜೂರಾದ ಅನುದಾನವನ್ನು ಉಪಯೋಗಿಸದೇ ದುರುಪಯೋಗ ಪಡಿಸಿಕೊಂಡಿರುವ ಆರೋಪಗ | ಸದರಿ ಪ್ರಕರಣದ ಕುರಿತು ವಿಚಾರಣೆ ಜರುಗಿಸಲು ಕರ್ನಾಟಕ ನಾಗರೀಕ ಸೇವೆ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ನಿಯಮ 14(ಎ)ಅಡಿ ಗೌರವಾನ್ವಿತ ಉಪಲೋಕಾಯುಕ್ತರಿಗೆ ವಹಿಸಿ ಆದೇಶಿಸಲು ಕ್ರಮವಹಿಸಲಾಗುತ್ತಿದೆ. | |

| | | | | | | | |
|---|---|---|---|---|---|---|---|
| | | ನವಲಗುಂದ | ಭದ್ರಾಪೂರ | ಶ್ರೀಮತಿ ವಿಜಯಲಕ್ಷ್ಮೀ ಎಂ ಬರದೂರು, ಶ್ರೀ ವೀರಣ್ಣಾ ಆರ್ ತೊಗ್ಗಿ, ಪಂ.ಅ.ಅ. ಮತ್ತು ಶ್ರೀ ರಾಘವೇಂದ್ರ ಜಿ ಪೂಜಾರ್. | ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಮಾಡಲಾದ ಖರ್ಚು ಬಾಪ್ತುಗಳಿಗೆ ಸಂಬಂಧಿಸಿದಂತೆ ವೋಚರ್ ಗಳನ್ನು ನಿರ್ವಹಿಸದೇ ಹಾಗೂ ಲೆಕ್ಕ ತಪಾಸಣೆಗೆ ಹಾಜರು ಪಡಿಸಿದೇ ಕರ್ತವ್ಯ ಲೋಪವೆಸಗಿರುವ ಆರೋಪಗಳು. | ಸದರಿ ನೌಕರರಿಗೆ ಕರ್ನಾಟಕ ನಾಗರೀಕ ಸೇವಾ(ಸಿಸಿಎ) ನಿಯಮಾವಳಿಗಳ ನಿಯಮ, 1957ರ ನಿಯಮ, 8(iii)ರನ್ವಯ ಮೂರು, ಎರಡು, ಮತ್ತು ಒಂದು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವ ದಂಡನೆ ವಿಧಿಸಿ ಆದೇಶಿಸಿದೆ. | ಸದರಿ ಆದೇಶವನ್ನು ಪ್ರಶ್ನಿಸಿ ಮಾನ್ಯ ಕೆ.ಎ.ಟಿ ಬೆಳಗಾವಿ ಪೀಠ ಇಲ್ಲಿ ಅರ್ಜಿ ಸಂಖ್ಯೆ:12265/2024 ನ್ನು ದಾಖಲಿಸಿರುತ್ತಾರೆ. |
| | | ಹುಬ್ಬಳ್ಳಿ | ಭಂಡಿವಾಡ | ಶ್ರೀಮತಿ ಬಸವ್ವ ಕೋಂ ಸಕ್ರೆಪ್ಪ ಪಂ.ಅ.ಅ ಮತ್ತು ಶ್ರೀ ಬಸವರಾಜ ಬಿ ಬಡಿಗೇರ, ಪಂ.ಅ.ಅ. | ಗ್ರಾಮ ಪಂಚಾಯತ್ 2016-17ನೇ ಸಾಲಿನ ಗ್ರಾಮ ವಿಕಾಸ ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನ ಶೇ.3 ರಷ್ಟು ಸೌರಬೆಳಕು / ಎಲ್ಇಡಿ ದೀಪ ಅಳವಡಿಸುವ ಕ್ರಿಯಾ ಯೋಜನೆಯನ್ನು ಬದಲಾವಣೆ ಮಾಡಲು ಮಾರ್ಗಸೂಚಿಗಳನ್ನು ಅನುಸರಿಸದೇ ನಿಯಮಾನುಸಾರ ಟೆಂಡರ್ ಕರೆಯದೇ ಅಂದಾಜು ಪಟ್ಟಿಯನ್ನು ತಯಾರಿಸದೇ ಸದರಿ ಅನುದಾನವನ್ನು ದುರ್ಬಳಕೆ ಮಾಡಿ ಕರ್ತವ್ಯಲೋಪವೆಸಗಿರುವ | ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ಇವರಿಗೆ ವಿಚಾರಣೆ ಮಾಡಿ ವರದಿ ನೀಡುವಂತೆ ಪತ್ರ ಬರೆಯಲಾಗಿದೆ | |

| | | | | | | | |
|---|---|---|---|---|---|---|---|
| | | | | | ಆರೋಪ. | | |
| | | ಹುಬ್ಬಳ್ಳಿ | ಛಬಿ | ಶ್ರೀ ಸಿ.ಬಿ ಪೂಜಾರ ಪಂ.ಅ.ಅ. | ಕುಡಿಯುವ ನೀರು ಸರಬರಾಜು ಯೋಜನೆ, ವಸತಿ ಯೋಜನೆ ನರೇಗಾ ಯೋಜನೆಯಡಿ ಗಿಡ ನೀಡುವ ಕಾಮಗಾರಿಯಲ್ಲಿ ಹಣ ದುರುಪಯೋಗ ಪಡಿಸಿಕೊಂಡಿರುವ ಆರೋಪ. | ನಿವೃತ್ತಿ ವೇತನದಿಂದ ಶೇ.15ರಷ್ಟನ್ನು 05 ವರ್ಷಗಳವರೆಗೆ ತಡೆಹಿಡಿದು ದಂಡನೆ ವಿಧಿಸಿ ಆದೇಶಿಸಿದೆ. | ಸದರಿ ಆದೇಶವನ್ನು ಪ್ರಶ್ನಿಸಿ, ಮಾನ್ಯ ಕೆ.ಎ.ಟಿ ಪೀಠ ಅರ್ಜಿ ಸಂಖ್ಯೆ:13320/2024 ನ್ನು ದಾಖಲಿಸಿರುತ್ತಾರೆ. |
| | | ಕುಂದಗೋಳ | ಶಿರೂರು | ಕೃಷ್ಣ ಕುಮಾರ್ ಬಾಕಳೆ(ನಿವೃತ್ತ) | ಕರ್ತವ್ಯ ಅವಧಿಯಲ್ಲಿ ಹಣದುರುಪಯೋಗ ಪಡಿಸಿಕೊಂಡಿರುವ ಆರೋಪಗಳ ಬಗ್ಗೆ. | ಇವರ ಪಿಂಚಣಿಯಲ್ಲಿ ಶೇ.10ರಷ್ಟನ್ನು 05 ವರ್ಷಗಳ ಕಾಲ ತಡೆಹಿಡಿಯುವ ದಂಡನೆ ವಿಧಿಸಿ ಆದೇಶಿಸಿದೆ. | ಸದರಿ ಆದೇಶವನ್ನು ಪ್ರಶ್ನಿಸಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠದಲ್ಲಿ ರಿಟ್ ಅರ್ಜಿ ಸಂಖ್ಯೆ:106536/2024 ನ್ನು ದಾಖಲಿಸಿರುತ್ತಾರೆ. |

| | | | | | | | |
|---|---|---|---|---|---|---|---|
| | | ಕುಂದಗೋಳ | ಶಿರೂರು | ಶ್ರೀ ವೈ ಹೆಚ್ ಹೊಟ್ಟೆಗೌಡರ್, ಪಂ.ಅ.ಅ. | ಕರ್ತವ್ಯ ಅವಧಿಯಲ್ಲಿ ಹಣದುರುಪಯೋಗ ಪಡಿಸಿಕೊಂಡಿರುವ ಆರೋಪಗಳ ಬಗ್ಗೆ. | ಎರಡು ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವ ದಂಡನೆ ವಿಧಿಸಿ ಆದೇಶಿಸಿದೆ. | ಸದರಿ ಆದೇಶವನ್ನು ಪ್ರಶ್ನಿಸಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠದಲ್ಲಿ ರಿಟ್ ಅರ್ಜಿ ಸಂಖ್ಯೆ:106561/2024 ನ್ನು ದಾಖಲಿಸಿರುತ್ತಾರೆ. |
| | | ಕಲಘಟಗಿ | ಮಿಶ್ರಿಕೋಟಿ | ಶ್ರೀ ಸಹದೇವ ಮಾಳೆ ಪಂ.ಅ.ಅ. | 2013-14ನೇ ಸಾಲಿನಲ್ಲಿ ಕಾಮಗಾರಿಗಳಲ್ಲಿ ಹಣ ದುರುಪಯೋಗ ಪಡಿಸಿಕೊಂಡಿರುವುದು. | ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂದ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ, 14-ರಡಿ ಮಾನ್ಯ ಲೋಕಾಯುಕ್ತರಿಗೆ ವಹಿಸಿ ಆದೇಶಿಸಿದೆ. | |
| | | ಕುಂದಗೋಳ | ಗುರುವಿನ ಹಳ್ಳಿ | ಶ್ರೀ ನವಾಬ್ ಸಾಬ್ ನದಾಫ್ ಪಂ.ಅ.ಅ. | 2016-17ನೇ ಸಾಲಿನಲ್ಲಿ MGNREGA ಯೋಜನೆಯಡಿಯಲ್ಲಿ ಹಣ ದುರುಪಯೋಗ ಪಡಿಸಿಕೊಂಡಿರುವ ಆರೋಪ. | ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂದ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ, 14-ರಡಿ ಮಾನ್ಯ ಲೋಕಾಯುಕ್ತರಿಗೆ ವಹಿಸಿ ಆದೇಶಿಸಿದೆ. | |
| | | ಧಾರವಾಡ | ಕೋಟೂರು | ಶ್ರೀಮತಿ ಜ್ಯೋತಿ ಚಲವಾದಿ, ಪಂ.ಅ.ಅ. | MGNREGA ಯೋಜನೆಯಡಿಯಲ್ಲಿ ಹಣ ದುರುಪಯೋಗ ಪಡಿಸಿಕೊಂಡಿರುವ ಆರೋಪ. | ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವ ದಂಡನೆ ವಿಧಿಸಿ ಆದೇಶಿಸಿದೆ. | ಸದರಿ ಆದೇಶವನ್ನು ಪ್ರಶ್ನಿಸಿ ಧಾರವಾಡ ಪೀಠ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಇಲ್ಲಿ ಅರ್ಜಿ |

| | | | | | | | |
|---|---|---|---|---|---|---|---|
| | | | | | | | ಸಂಖ್ಯೆ:102264/2025 ನ್ನು ದಾಖಲಿಸಿರುತ್ತಾರೆ. |
| | | ಹುಬ್ಬಳ್ಳಿ | ಇಬ್ರಾಹಿಂಪುರ | ಶ್ರೀ ರಾಘವೇಂದ್ರ ಜಿ ಪೂಜಾರ್, ಪಂ.ಅ.ಅ. | ವೋಚರ್ ಗಳನ್ನು ನಿರ್ವಹಿಸದೇ ಹಾಗೂ ಲೆಕ್ಕ ತಪಾಸಣೆಗೆ ಹಾಜರು ಪಡಿಸಿದೇ ಕರ್ತವ್ಯ ಲೋಪವೆಸಗಿರುವ ಆರೋಪಗಳು. | ಒಂದು ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವ ದಂಡನೆ ವಿಧಿಸಿ ಆದೇಶಿಸಿದೆ. | ಸದರಿ ಆದೇಶವನ್ನು ಪ್ರಶ್ನಿಸಿ ಬೆಳಗಾವಿ ಪೀಠ ಮಾನ್ಯ ಕೆ.ಎ.ಟಿ ಬೆಳಗಾವಿ ಅರ್ಜಿ ಸಂಖ್ಯೆ:12345/2024 ನ್ನು ದಾಖಲಿಸಿರುತ್ತಾರೆ. |
| | | ಕುಂದಗೋಳ | ಶಿರೂರು | ಶ್ರೀಮತಿ ಯಲ್ಲವ್ವ ಬಸಪ್ಪ ನರ್ತಿ, ಅಧ್ಯಕ್ಷರು, | ನರೇಗಾ ಯೋಜನೆಯಡಿ ಸಿ.ಡಿ ನಿರ್ಮಾಣ ಮಾಡಿ ಹಣ ದುರುಪಯೋಗ ಪಡಿಸಿಕೊಂಡಿರುವ ಆರೋಪ. | ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ಇವರಿಗೆ ವರದಿ ಸಲ್ಲಿಸುವಂತೆ ಪತ್ರ ಬರೆಯಲಾಗಿದೆ. | |
| | | ಕಲಘಟಗಿ | ಸೂಳಿ ಕಟ್ಟಿ | ಶ್ರೀ ಧರಮ್ ಪ್ರಸಾದ್ ಕಲವಾಡ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಶ್ರೀ. ಎ.ಹೆಚ್. ಮುನಿಯಾರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ. | 2018-19ನೇ ಸಾಲಿನ ಎಂ.ಜಿ.ಎನ್.ಆರ್.ಇ.ಜಿ.ಎ. ಯೋಜನೆಯಡಿ ಸೂಳಿಕಟ್ಟಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಡಿಂಬುವಳ್ಳಿ ಗ್ರಾಮದ ಮೌಲಾಲಿ ರಟ್ಟಿಹಳ್ಳಿ ಮನೆಯಿಂದ ಕರಿಯಮ್ಮನ ಗುಡಿಯವರೆಗೆ ಸಿ.ಸಿ. ರಸ್ತೆ ನಿರ್ಮಾಣ ಕಾಮಗಾರಿಗೆ ಹಣ ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ. | ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮು.ಕಾ.ನಿ.ಅ ಧಾರವಾಡ ರವರಿಗೆ ವರದಿ ಸಲ್ಲಿಸುವಂತೆ ಪತ್ರ ಬರೆಯಲಾಗಿದೆ. | |

| | | | | | | | |
|---|---|---|---|---|---|---|---|
| | | ಕಲಘಟಕಿ | ಸೂಳಿ ಕಟ್ಟಿ | ಶ್ರೀ ಸಿದ್ದಪ್ಪ ಎಫ್. ಐರಾಣಿ ಪಂ.ಅ.ಅ. | MGNREGA ಯೋಜನೆಯಡಿಯಲ್ಲಿ ಹಣ ದುರುಪಯೋಗ ಪಡಿಸಿಕೊಂಡಿರುವ ಆರೋಪ. | ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವ ದಂಡನೆ ವಿಧಿಸಿ ಆದೇಶಿಸಿದೆ. | ಸದರಿ ಆದೇಶವನ್ನು ಪ್ರಶ್ನಿಸಿ ಬೆಳಗಾವಿ ಪೀಠ ಮಾನ್ಯ ಕೆ.ಎ.ಟಿ ಬೆಳಗಾವಿ ಅರ್ಜಿ ಸಂಖ್ಯೆ:11277/2021 ನ್ನು ದಾಖಲಿಸಿರುತ್ತಾರೆ. |
| 5. | ಬಾಗಲಕೋಟೆ | ಹುನಗುಂದ | ನಂದವಾಡಗಿ | ಶ್ರೀ ಮಹಾಂತೇಶ ಚಲವಾದಿ, ಪಂ.ಅ.ಅ. | ಬಸವ ವಸತಿ ಯೋಜನೆಯಡಿಯಲ್ಲಿ ಅವ್ಯವಹಾರದ ಕುರಿತು. | ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂದ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ, 14-ರಡಿ ಮಾನ್ಯ ಲೋಕಾಯುಕ್ತರಿಗೆ ವಹಿಸಲು ಕ್ರಮ ವಹಿಸಲಾಗುತ್ತಿದೆ. | |
| | | ಇಳಕಲ್ | ಸೂಳೇಬಾವಿ | ಶ್ರೀ ಎಸ್.ವಿ ಮಾದನ ಶೆಟ್ಟಿ ಪಂ.ಅ.ಅ. | 2011-12ನೇ ಸಾಲಿನ ಇಂದಿರಾ ಅವಾಜ್ ರಾಜೀವ ಗಾಂಧಿ, ಬಸವ ಆಶ್ರಯ ಯೋಜನೆಯಡಿ ಆರೋಪಗಳ ಕುರಿತು. | ಪಿಂಚಣಿ ಯಲ್ಲಿ ಶೇ.25ರಷ್ಟನ್ನು ತಡೆಹಿಡಿಯುವ ದಂಡನೆ ವಿಧಿಸಿ ಆದೇಶಿಸಿದೆ. | ಸದರಿ ಆದೇಶವನ್ನು ಪ್ರಶ್ನಿಸಿ, ಬೆಳಗಾವಿ ಪೀಠ ಮಾನ್ಯ ಕೆ.ಎ.ಟಿ ಬೆಳಗಾವಿ ಅರ್ಜಿ ಸಂಖ್ಯೆ:13375/2024 ನ್ನು ದಾಖಲಿಸಿರುತ್ತಾರೆ. |
| | | ಬೀಳಗಿ | ನರಕಲದಿನ್ನಿ | ಶ್ರೀ ವೀರಣ್ಣಾ ಪಂ.ಅ.ಅ. | MGNREGA ಯೋಜನೆಯಡಿಯಲ್ಲಿ ಹಣ ದುರುಪಯೋಗ ಪಡಿಸಿಕೊಂಡಿರುವ ಆರೋಪ. | ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವ ದಂಡನೆ ವಿಧಿಸಿ ಆದೇಶಿಸಿದೆ. | ಸದರಿ ಆದೇಶವನ್ನು ಪ್ರಶ್ನಿಸಿ ಬೆಳಗಾವಿ ಪೀಠ ಮಾನ್ಯ ಕೆ.ಎ.ಟಿ ಬೆಳಗಾವಿ ಅರ್ಜಿ ಸಂಖ್ಯೆ:10701/2024 ನ್ನು ದಾಖಲಿಸಿರುತ್ತಾರೆ |

| | | | | | | | | |
|---|---|---|---|---|---|---|---|---|
| 6. | ದಾವಣಗೆರೆ | ದಾವಣಗೆರೆ | ಹುಲಿಕಟ್ಟೆ | ಅಧ್ಯಕ್ಷರು | ಸದಸ್ಯರಾಗಿದ್ದ ಅವಧಿಯಲ್ಲಿ ಕಾಮಗಾರಿಗಳ ಸಲುವಾಗಿ ತಮ್ಮ ಮಗನಾದ ಹನುಮಂತಪ್ಪ ಇವರ ಹೆಸರಿಗೆ ರೂ. 5500/-, 5100/-, 2200 /-ಗಳ ಚೆಕ್ ನೀಡಿರುತ್ತಾರೆ | ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿರುತ್ತದೆ. | - | - |
| 7. | ತುಮಕೂರು | ಕುಣಿಗಲ್ | ಕಗ್ಗೆರೆ | PDO & ಕಾರ್ಯದರ್ಶಿ | 5 ವರ್ಷಗಳ ಶೌಚಾಲಯ ನಿರ್ಮಾಣದಲ್ಲಿ ಪೂರ್ತಿ ಹಣ ಬಿಡುಗಡೆಯಾಗಿದ್ದರೂ ಫಲಾನುಭವಿಗಳಿಗೆ ಅರ್ಧ ಹಣ ಮಾತ್ರ ಪಾವತಿಸಿರುತ್ತಾರೆ | ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿರುತ್ತದೆ. | ರೂ. 3,66,963 | |
| 8. | ತುಮಕೂರು | ಕುಣಿಗಲ್ | ಹುತ್ರಿದುರ್ಗ | ಮಾಜಿ ಅಧ್ಯಕ್ಷರು | ರಾಜೀನಾಮೆ ಅಂಗೀಕರಾದ ನಂತರ 1.00 ಲಕ್ಷಗಳನ್ನು 15ನೇ ಹಣಕಾಸು ಯೋಜನೆಯಿಂದ ಹಾಗೂ ನಿಧಿ-1ರಲ್ಲಿ 2.00 ಲಕ್ಷ ರೂ.ಗಳು ಮತ್ತು ESROದಲ್ಲಿ ಬೇನಾಮಿ ಹೆಸರುಗಳಲ್ಲಿ ಸುಮಾರು 1.48 ಲಕ್ಷ ರೂ.ಗಳನ್ನು ಸದರಿಯವರು ಡ್ರಾ ಮಾಡಿರುತ್ತಾರೆ. | ಕರ್ನಾಟಕ ಗ್ರಾಮ್ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 43 (ಎ) (2) ರನ್ವಯ ಆರು ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಿದೆ. | ರೂ. 4.48 ಲಕ್ಷಗಳು | - |
| 9. | ತುಮಕೂರು | ಮಧುಗಿರಿ | ಕೊಡಿಗೇನಹಳ್ಳಿ | ಮಾಜಿ ಅಧ್ಯಕ್ಷರು & ಸದಸ್ಯರು | 2016-17ರಿಂದ 2020-21ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿ ಸದಸ್ಯರ ಮಗನಿಗೆ ನರೇಗಾ ಯೋಜನೆಯಡಿ ಕೆಲವೊಂದು ಕಾಮಗಾರಿಗಳನ್ನು ವಹಿಸಿ ರೂ.22,74,477/-ಗಳನ್ನು | ಕರ್ನಾಟಕ ಗ್ರಾಮ್ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 43 (ಎ) (2) ರನ್ವಯ ಆರು ವರ್ಷಗಳ ಕಾಲ | | |

| | | | | | | | | |
|---|---|---|---|---|---|---|---|---|
| | | | | | ಪಾವತಿಸಿರುತ್ತಾರೆ. | ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಿದೆ. | | |
| 10. | ಕೊಪ್ಪಳ | ಗಂಗಾವತಿ | ಮಲ್ಲಾಪುರ | ಸದಸ್ಯರು | ರಾಜೀನಾಮೆ ಅಂಗೀಕಾರವಾಗಿ ಇವರ ಅವಧಿ ಮುಗಿದು ಅಧಿಕಾರದಲ್ಲಿ ಇರದಿದ್ದರೂ ಸಹ, ಅಪಾದಿತ ಮಾಜಿ ಅಧ್ಯಕ್ಷರು ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಎಫ್.ಟಿ.ಓ FTO Second Segnatory ನಲ್ಲಿ ರೂ. 19,02,029/- ಗಳನ್ನು ಮತ್ತು 15ನೇ ಹಣಕಾಸು ಯೋಜನೆಯ ಇ-ಗ್ರಾಮ ಸ್ವರಾಜ್ ನಲ್ಲಿ ರೂ. 41,200/-ಗಳನ್ನು ಹೀಗೆ ಒಟ್ಟು ರೂ. 19,43,229/- ಗಳನ್ನು ಪಾವತಿ ಮಾಡಿರುತ್ತಾರೆ | ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿರುತ್ತದೆ. | | |
| 11. | ದಾವಣಗೆರೆ | ದಾವಣಗೆರೆ | ಅಣಜಿ ಗ್ರಾಮ ಪಂಚಾಯಿತಿ | ಸದಸ್ಯರು | 2021-22ನೇ ಸಾಲಿನಲ್ಲಿ ಮಹಾತ್ಮಾ ಗಾಂಧಿ ನರೇಗಾ ಯೋಜನೆಯ ಕಾಮಗಾರಿಗಳ ಅನುಷ್ಠಾನದಲ್ಲಿ ಸುಮಾರು ರೂ.10.00 ಲಕ್ಷಕ್ಕೂ ಹೆಚ್ಚು ಬೆಲೆ ಬಾಳುವ ಸಾಮಗ್ರಿ ಸರಬರಾಜು ಮಾಡಿ ಹಣ ಪಡೆದಿರುವ ಆರೋಪ | ಕರ್ನಾಟಕ ಗ್ರಾಮ್ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 43 (ಎ) ರನ್ವಯ ಸದಸ್ಯ ಸ್ಥಾನದಿಂದ ತೆಗೆದುಹಾಕಿ ಹಾಗೂ 43 (ಎ) (2) ರನ್ವಯ ಆರು | ರೂ. 10.00 ಲಕ್ಷಗಳು | |

| | | | | | | | | |
|---|---|---|---|---|---|---|---|---|
| | | | | | | ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಿದೆ. | | |
| 12. | ಚಿಕ್ಕಮಗಳೂರು | ಕಡೂರು | ನಾಗೇನಹಳ್ಳಿ | ಸದಸ್ಯರು | ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದ ಅವಧಿಯಲ್ಲಿ ಇವನ ಮಗನ ಹೆಸರಿನಲ್ಲಿ ಬಿಲ್ ಪಾವತಿಯಾಗಿರುತ್ತದೆ. | ಪ್ರಸ್ತಾವನೆಯು ಪರಿಶೀಲನಾ ಹಂತಲ್ಲಿರುತ್ತದೆ. | | |
| 13. | ಚಿಕ್ಕಮಗಳೂರು | ಮೂಡಿಗೆರೆ | ಗೋಣಿಬೀಡು | ಸದಸ್ಯರು | ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಅವಧಿಯಲ್ಲಿ ತಮ್ಮ ಅಧಿಕಾರ ದುರುಪಯೋಗಪಡಿಸಿ ಕೊಂಡು ಕಾನೂನಿಗೆ ವಿರುದ್ಧವಾಗಿ ತಮ್ಮ ಪತಿಗೆ ಗ್ರಾಮ ಪಂಚಾಯತಿಯ ವಿವಿಧ ಯೋಜನೆಗಳಡಿ ಸುಮಾರು 82 ಕಾಮಗಾರಿಗಳನ್ನು ನಿರ್ವಹಿಸಲು ಆದೇಶ ಮಾಡಿಕೊಟ್ಟು ಶ್ರೀ ಪ್ರಕಾಶ್ ರವರು ರೂ. 58,45,618/- ಗಳ ಬಿಲ್ ಮೊತ್ತವನ್ನು | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ 1993ರ ಪ್ರಕರಣ 43(ಎ)(v) ರಡಿ ತೆಗೆದುಹಾಕಲು ಹಾಗೂ ಹಾಗೂ ಸದರಿ ಅಧಿನಿಯಮದ 43(ಎ)(2)ರನ್ವಯ ಆರು ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಿದೆ. | | |
| 14. | ಉತ್ತರ ಕನ್ನಡ ಜಿಲ್ಲೆ | ಸಿದ್ದಾಪುರ ತಾಲ್ಲೂಕು | ತಾಂಡಾ ಗುಂಡಿ | ಶ್ರೀಮತಿ ಕಲಾವತಿ, ಮಾಜಿ ಅಧ್ಯಕ್ಷರು | ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಅವಧಿಯಲ್ಲಿ ಗ್ರಾ.ಪಂ. ಕಾಮಗಾರಿಗಳನ್ನು ಮುಕ್ತಾಯಗೊಳಿಸುವ ಪೂರ್ವದಲ್ಲಿಯೇ ಅನುದಾನ ಪಾವತಿಸಿರುತ್ತಾರೆ. | ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 97 ಗ್ರಾಪಂಕಾ 2023, ದಿ:12.11.2025ರಲ್ಲಿ ಅವರನ್ನು ಕ.ಗ್ರಾ.ಸ್ವ.& ಪಂ.ರಾಜ್ ಅಧಿನಿಯಮಗಳಡಿ ಮುಂದಿನ 6 | ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ. | ಕಾಮಗಾರಿಗಳನ್ನು ಮುಕ್ತಾಯಗೊಳ್ಳುವ ಪೂರ್ವದಲ್ಲಿ ಹಣ ಪಾವತಿಸಿರುತ್ತಾರೆ. |

| | | | | | | | | |
|---|---|---|---|---|---|---|---|---|
| | | | | | | ವರ್ಷಗಳವರೆಗೆ ಯಾವುದೇ ಪಂಚಾಯತ್ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಲಾಗಿದೆ. | | |
| 15. | ಚಾಮರಾಜನಗರ ಜಿಲ್ಲೆ | ಚಾಮರಾಜನಗರ ತಾಲ್ಲೂಕು | ಕೊಡ್ಲೂರು ಗ್ರಾ.ಪಂ. | ಶ್ರೀಮತಿ ಗಗನ ಹೆಚ್.ಎಸ್.ಹಾಲಿ ಅಧ್ಯಕ್ಷರು | ಸಾಮಾನ್ಯ ಸಭೆಯ ನಡವಳಿ ಪುಸ್ತಕ ತಿದ್ದುರುವ ಆರೋಪ | ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 264 ಜಿಪಿಎ 2025, ದಿ:07.01.2025ರಲ್ಲಿ ಅವರನ್ನು ಕ.ಗ್ರಾ.ಸ್ವ.& ಪಂ.ರಾಜ್ ಅಧಿನಿಯಮಗಳಡಿ ಅಧ್ಯಕ್ಷ ಸ್ಥಾನದಿಂದ ತೆಗೆದು ಹಾಕಿದೆ ಹಾಗೂ ಮುಂದಿನ 6 ವರ್ಷಗಳವರೆಗೆ ಯಾವುದೇ ಪಂಚಾಯತ್ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಲಾಗಿದೆ. | ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ. | ಅಧಿಕಾರ ದುರುಪಯೋಗ ಹಾಗೂ ಕರ್ತವ್ಯ ಲೋಪ ಎಸಗಿರುವ ಆರೋಪಗಳು ದೃಢಪಟ್ಟಿರುತ್ತವೆ. |
| 16. | ದಕ್ಷಿಣ ಕನ್ನಡ ಜಿಲ್ಲೆ | ಕಡಬ ತಾಲ್ಲೂಕು | ಶಿರಾಡಿ ಗ್ರಾ.ಪಂ. | ಶ್ರೀ ಎಂ.ಕೆ. ಪೌಲೋಸ್, ಹಾಲಿ ಸದಸ್ಯರು | ತಮ್ಮ ಪತ್ನಿಯವರಿಗೆ ಗ್ರಾ.ಪಂ. ಕಾಮಗಾರಿಗಳನ್ನು ಗುತ್ತಿಗೆ ನೀಡುವಲ್ಲಿ ಅಧಿಕಾರ ದುರುಪಯೋಗಪಡಿಸಿಕೊಂಡಿರುತ್ತಾರೆ. | ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 290 ಜಿಪಿಎ 2025, ದಿ:06.01.2025ರಲ್ಲಿ ಅವರನ್ನು ಕ.ಗ್ರಾ.ಸ್ವ.& ಪಂ.ರಾಜ್ ಅಧಿನಿಯಮಗಳಡಿ ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಿದೆ ಹಾಗೂ ಮುಂದಿನ 6 ವರ್ಷಗಳವರೆಗೆ ಯಾವುದೇ | ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ. | ನಿಯಮಗಳ ಉಲ್ಲಂಘನೆ, ಅಧಿಕಾರ ದುರುಪಯೋಗ ಹಾಗೂ ಕರ್ತವ್ಯ ಲೋಪ ಎಸಗಿರುವ ಆರೋಪಗಳು ದೃಢಪಟ್ಟಿರುತ್ತವೆ. |

| | | | | | | | | |
|---|---|---|---|---|---|---|---|---|
| | | | | | | ಪಂಚಾಯತ್ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಲಾಗಿದೆ. | | |
| 17. | ಉತ್ತರ ಕನ್ನಡ ಜಿಲ್ಲೆ | ಭಟ್ಕಳ ತಾಲ್ಲೂಕು | ಮುರ್ಡೇಶ್ವರ ಗ್ರಾ.ಪಂ. | ಹಾಲಿ ಸದಸ್ಯರು | ಶ್ರೀ ಉದಯ ಸುರೇಂದ್ರ ನಾಯಕ ಮತ್ತು ಶ್ರೀ ಅನಂತ ಶನಿಯಾರ ನಾಯ್ಕ,ರವರು ತಮ್ಮ ಸಂಬಂಧಿಕರಿಗೆ ಗ್ರಾ.ಪಂ. ಮಳಿಗೆಗಳನ್ನು ನಿಯಮಗಳನ್ನು ಉಲ್ಲಂಘಿಸಿ ಬಾಡಿಗೆ ನೀಡುವಲ್ಲಿ ಅಧಿಕಾರ ದುರುಪಯೋಗ | ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 351 ಜಿಪಿಎ 2025, ದಿ:07.01.2025ರಲ್ಲಿ ಅವರನ್ನು ಕ.ಗ್ರಾ.ಸ್ವ.& ಪಂ.ರಾಜ್ ಅಧಿನಿಯಮಗಳಡಿ ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಿದೆ ಹಾಗೂ ಮುಂದಿನ 6 ವರ್ಷಗಳವರೆಗೆ ಯಾವುದೇ ಪಂಚಾಯತ್ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಲಾಗಿದೆ. | ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ. | ನಿಯಮಗಳ ಉಲ್ಲಂಘನೆ, ಅಧಿಕಾರ ದುರುಪಯೋಗ ಹಾಗೂ ಕರ್ತವ್ಯ ಲೋಪ ಎಸಗಿರುವ ಆರೋಪಗಳು ದೃಢಪಟ್ಟಿರುತ್ತವೆ |
| 18. | ಉತ್ತರ ಕನ್ನಡ ಜಿಲ್ಲೆ | ಅಂಕೋಲಾ | ಡೋಂಗ್ರಿ | ಶ್ರೀ ನಿತ್ಯಾನಂದ ಹರಿಹರ ಭಟ್ಟ ಹಾಗೂ ಇತರ 3 ಸದಸ್ಯರು | ಗ್ರಾಮ ಪಂಚಾಯಿತಿಗೆ ಸಂಬಂಧಿಸಿದ ಕಾಮಗಾರಿ/ ಕೆಲಸಗಳನ್ನು ತಮ್ಮ ಸಂಬಂಧಿಕರ ಹೆಸರಿನಲ್ಲಿ ಮಾಡಿಸಿ, ಹಣ ದುರುಪಯೋಗ ಪಡಿಸಿಕೊಂಡಿರುವ ಆರೋಪಗಳು | ಸದಸ್ಯತ್ವ ರದ್ದುಪಡಿಸಿದೆ. | ರೂ.26,000/- | - |
| 19. | ಉತ್ತರ ಕನ್ನಡ | ಯಲ್ಲಾಪುರ | ಉಮ್ಮಚಗಿ ಗ್ರಾ.ಪಂ | ಶ್ರೀಮತಿ ತಿಮ್ಮವ್ವ ಗೋವಿಂದ ಬಸಾಪುರ, ಸದಸ್ಯರು, | ಇವರು ತಮ್ಮ ಪತಿಯವರಾದ ಶ್ರೀ ಗೋವಿಂದ ಬಸಾಪುರ ಇವರ ಮೂಲಕ 2020-21 ಹಾಗೂ 2021-22ನೇ ಸಾಲಿನ ಉಮ್ಮಚಗಿ ಗ್ರಾಮ ಪಂಚಾಯಿತಿ | ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 380 ಜಿಪಿಎ 2025, ದಿ:05.01.2025ರಲ್ಲಿ ಸದಸ್ಯತ್ವ ರದ್ದುಪಡಿಸಿದ ಹಾಗೂ 6 ವರ್ಷ | ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ. | ನಿಯಮಗಳ ಉಲ್ಲಂಘನೆ |

| | | | | | | | | |
|---|---|---|---|---|---|---|---|---|
| | | | | | ವ್ಯಾಪ್ತಿಯಲ್ಲಿನ ಕಾಮಗಾರಿಗಳನ್ನು ಮಾಡಿಸಿರುತ್ತಾರೆ. | ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಿದೆ. | | |
| 20. | ರಾಯಚೂರು ಜಿಲ್ಲೆ | ರಾಯಚೂರು ತಾಲ್ಲೂಕು | ಹರವಿ ಗ್ರಾ.ಪಂ. | ಶ್ರೀ ಹನುಮಂತ ಹಾಗೂ ಇತರೆ 12 ಜನ ಸದಸ್ಯರು | 15ನೇ ಹಣಕಾಸು ಯೋಜನೆಯಡಿ ವಿವಿಧ ದುರಸ್ಥಿ ಕಾಮಗಾರಿಗಳ ಕೂಲಿ ಮೊತ್ತವನ್ನು ತಮ್ಮ ರಕ್ತ ಸಂಬಂಧಿಕರ ಹೆಸರಿನಲ್ಲಿ ಹಣ ಪಡೆದಿರುವ ಆರೋಪಗಳು ದೃಢಪಟ್ಟಿರುತ್ತವೆ. | ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 427 ಜಿಪಿಎ 2024, ದಿ:16.08.2025ರಲ್ಲಿ ಸದಸ್ಯತ್ವ ರದ್ದುಪಡಿಸಿದೆ ಹಾಗೂ 6 ವರ್ಷ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಿದೆ. | ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟ ನಿರ್ಧರಿಸಿ, ವಸೂಲಿ ಮಾಡಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಸೂಚಿಸಲಾಗಿದೆ | ನಿಯಮಗಳ ಉಲ್ಲಂಘನೆ |
| 21. | ಕೊಡಗು | ಪೊನ್ನಂಪೇಟೆ | ಅರವತ್ತೋಕ್ಲು ಗ್ರಾ.ಪಂ. | ಶ್ರೀ ಶಂಕರನಾರಾಯಣ, ಪಿಡಿಓ | ಹಸಿಮೀನು ಮಾರಾಟದ ಹಕ್ಕನ್ನು ಪಡೆದ ಮೀನು ಮಾರಾಟಗಾರರಿಗೆ ಲೈಸೆನ್ಸ್ ವಿತರಿಸದೇ ಕರ್ತವ್ಯಲೋಪ ಎಸಗಿರುವುದು | ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 428 ಜಿಪಿಎ 2023, ದಿ:06.08.2025ರಲ್ಲಿ ರೂ.5000/- ಗಳ ದಂಡ ವಿಧಿಸಿ ಆದೇಶಿಸಲಾಗಿದೆ. | - | - |
| 22. | ದಕ್ಷಿಣ ಕನ್ನಡ ಜಿಲ್ಲೆ | ಮೂಡಬಿದ್ರೆ ತಾಲ್ಲೂಕು | ನೆಲ್ಲಿಕಾರು ಗ್ರಾ.ಪಂ. | ಶ್ರೀಮತಿ ಸುಶೀಲ, ಮಾಜಿ ಅಧ್ಯಕ್ಷರು ಹಾಲಿ ಉಪಾಧ್ಯಕ್ಷರು | ಗ್ರಾಮ ಪಂಚಾಯಿತಿಗೆ ಸಂಬಂಧಿಸಿದ ನರೇಗಾ ಯೋಜನೆ ಹಾಗೂ ಇತರೆ ಯೋಜನೆಗಳಡಿ ನಿರ್ವಹಿಸಿದ ಕಾಮಗಾರಿಗಳಲ್ಲಿ ಹಣ ದುರುಪಯೋಗ | ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 730 ಜಿಪಿಎ 2025, ದಿ:07.01.2025ರಲ್ಲಿ ಉಪಾಧ್ಯಕ್ಷ ಸ್ಥಾನದಿಂದ ತೆಗೆದು ಹಾಕಿದೆ ಮತ್ತು ಮುಂದಿನ 6 ವರ್ಷಗಳಕಾಲ ಯಾವುದೇ ಗ್ರಾ.ಪಂ. ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಲಾಗಿದೆ. | ರೂ.48,289/- ಗಳನ್ನು ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವ ದಿನಾಂಕದಿಂದ ಶೇ.8ರ ಬಡ್ಡಿದರ ದೊಂದಿಗೆ ವಸೂಲಿಗೆ ಆದೇಶಿಸಲಾಗಿದೆ | - |

| | | | | | | | | |
|---|---|---|---|---|---|---|---|---|
| 23. | ಕಲಬುರಗಿ ಜಿಲ್ಲೆ | ಆಳಂದ ತಾಲ್ಲೂಕು | ಕವಲಗಾ ಗ್ರಾ.ಪಂ | ಶ್ರೀ ಪ್ರಕಾಶ ತುಕಾರಾಮ ಸೇರಿದಂತೆ ಇತರೆ 6 ಜನ ಸದಸ್ಯರು | ಗ್ರಾಮ ಪಂಚಾಯತಿಯಲ್ಲಿ 15 ನೇ ಹಣಕಾಸು ಯೋಜನೆಯಡಿಯಲ್ಲಿ ಕಾನೂನ ಬಾಹಿರವಾಗಿ ತಮ್ಮ ಹಾಗೂ ತಮ್ಮ ಸಂಬಂಧಿಕರ ಹೆಸರಿನಲ್ಲಿ ಗ್ರಾಮ ಪಂಚಾಯತಿ ಹಣವನ್ನು ಚೆಕ್ ಮೂಲಕ ಪಡೆದುಕೊಂಡು ಕರ್ತವ್ಯಲೋಪವೆಸಗಿರುತ್ತಾರೆ. | ಪರಿಶೀಲನಾ ಹಂತದಲ್ಲಿರುತ್ತದೆ. | - | - |
| 24. | ರಾಯಚೂರು ಜಿಲ್ಲೆ | ದೇವದುರ್ಗ ತಾಲ್ಲೂಕು | ಬಿ.ಗಣೇಕಲ್ ಗ್ರಾಮ ಪಂಚಾಯಿತಿ | ಶ್ರೀ ಹನುಮಂತು ಹಾಗೂ ಇತರೆ ಸದಸ್ಯರು | 2011-12 ರಿಂದ 2014-15ನೇ ಸಾಲಿನಲ್ಲಿ ಬಿ.ಗಣೇಕಲ್ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಜಲನಿರ್ಮಲ ಯೋಜನೆಯಡಿ ಅನುಷ್ಠಾನಗೊಳಿಸಿದ ಕಾಮಗಾರಿಗಳು ಉತ್ತಮ ಗುಣಮಟ್ಟದಲ್ಲಿ ನಿರ್ವಹಿಸದೇ ಇದ್ದರೂ, ಅನುದಾನ ಬಿಡುಗಡೆ ಮಾಡಿ ಸರ್ಕಾರಕ್ಕೆ ರೂ.2.81 ಕೋಟಿಗೂ ಅಧಿಕ ಆರ್ಥಿಕ ನಷ್ಟ ಉಂಟು ಮಾಡಿ, ಹಣ ದುರುಪಯೋಗ/ ದುರ್ನಡತೆ | ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 550 ಜಿಪಿಎ 2024, ದಿ:02.06.2025ರಲ್ಲಿ ಅಧ್ಯಕ್ಷ/ಉಪಾಧ್ಯಕ್ಷ ಸ್ಥಾನದಿಂದ ತೆಗೆದು ಹಾಕಿದೆ ಮತ್ತು ಮುಂದಿನ 6 ವರ್ಷಗಳಕಾಲ ಯಾವುದೇ ಗ್ರಾ.ಪಂ. ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಲಾಗಿದೆ. | ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟ ನಿರ್ಧರಿಸಿ, ವಸೂಲಿ ಮಾಡಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಸೂಚಿಸಲಾಗಿದೆ | ನಿಯಮಗಳ ಉಲ್ಲಂಘನೆ |
| 25. | ಕೊಪ್ಪಳ ಜಿಲ್ಲೆ | ಕಾರಟಗಿ ತಾಲ್ಲೂಕು | ಬರಗೂರು ಗ್ರಾ, ಪಂ. | ಶ್ರೀಮತಿ ಯಲ್ಲಮ್ಮ, ಹಿಂದಿನ ಅಧ್ಯಕ್ಷರು, | ಕಾಮಗಾರಿಗಳನ್ನು ತಮ್ಮ ರಕ್ತ ಸಂಬಂಧಿಕರ ಹೆಸರಿನಲ್ಲಿ ಹಣ ಪಡೆದಿರುವ ಆರೋಪಗಳು ದೃಢಪಟ್ಟಿರುತ್ತವೆ. | ಪರಿಶೀಲನಾ ಹಂತದಲ್ಲಿರುತ್ತದೆ. | - | - |
| 26. | ಕೊಪ್ಪಳ ಜಿಲ್ಲೆ | ಕಾರಟಗಿ ತಾಲ್ಲೂಕು | ಬರಗೂರು ಗ್ರಾ, ಪಂ. | ಹಾಲಿ ಅಧ್ಯಕ್ಷರು ಹಾಗೂ ಸದಸ್ಯರು | ಅನುದಾನ ಹಾಗೂ ಅಧಿಕಾರ ದುರುಪಯೋಗ | ಪರಿಶೀಲನಾ ಹಂತದಲ್ಲಿರುತ್ತದೆ. | - | - |

| | | | | | | | | |
|---|---|---|---|---|---|---|---|---|
| 27. | ರಾಯಚೂರು ಜಿಲ್ಲೆ | ರಾಯಚೂರು ತಾಲ್ಲೂಕು | ಉಡುಮಗಲ್ ಗ್ರಾ.ಪಂ | 8 ಜನ ಹಾಲಿ ಸದಸ್ಯರು | ತಮ್ಮ ಹಾಗೂ ತಮ್ಮ ಸಂಬಂಧಿಕರ ಹೆಸರಿನಲ್ಲಿ ಚೆಕ್ ಮೂಲಕ ಹಣ ಪಡೆದಿರುವ ಆರೋಪ | ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 278 ಜಿಪಿಎ 2020, ದಿ:02.06.2025ರಲ್ಲಿ ಅಧ್ಯಕ್ಷ/ಉಪಾಧ್ಯಕ್ಷ ಸ್ಥಾನದಿಂದ ತೆಗೆದು ಹಾಕಿದೆ ಮತ್ತು ಮುಂದಿನ 6 ವರ್ಷಗಳಕಾಲ ಯಾವುದೇ ಗ್ರಾ.ಪಂ. ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಲಾಗಿದೆ. | - | - |
| 28. | ರಾಯಚೂರು ಜಿಲ್ಲೆ | ಮಾನವಿ ತಾಲ್ಲೂಕು | ಉಟಕನೂರು ಗ್ರಾ.ಪಂ., | ಹಾಲಿ ಅಧ್ಯಕ್ಷರಾದ ಶ್ರೀಮತಿ ಈರಮ್ಮ ಹಾಗೂ ಹಿಂದಿನ ಅಧ್ಯಕ್ಷರಾದ ಶ್ರೀಮತಿ ಕಾವೇರಿ ಮತ್ತು ಅಂದಿನ ಪಿಡಿಓ | ಗ್ರಾಮ ಪಂಚಾಯಿತಿ ಕಾಮಗಾರಿಗಳನ್ನು ಕುಟುಂಬದ ಸದಸ್ಯರಿಗೆ ನೀಡಿ, ಅಧಿಕಾರ ದುರುಪಯೋಗ ಹಾಗೂ ಹಣ ದುರುಪಯೋಗಪಡಿಸಿಕೊಂಡಿರುವ ಆರೋಪಗಳು | ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 61 ಗ್ರಾಪಂಅ 2023, ದಿ:17.01.2025ರಲ್ಲಿ ಅಧ್ಯಕ್ಷ/ಉಪಾಧ್ಯಕ್ಷ ಸ್ಥಾನದಿಂದ ತೆಗೆದು ಹಾಕಿದೆ ಮತ್ತು ಮುಂದಿನ 6 ವರ್ಷಗಳಕಾಲ ಯಾವುದೇ ಗ್ರಾ.ಪಂ. ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಲಾಗಿದೆ. | - | ಪಂ.ಅ.ಅ ವಿರುದ್ಧ ಇಲಾಖೆ ವಿಚಾರಣೆ ಕೈಗೊಂಡು, ಶಿಸ್ತು ಕ್ರಮ ಜರುಗಿಸಲು ಸೂಚಿಸಲಾಗಿದೆ. |

| | | | | | | | |
|---|---|---|---|---|---|---|---|
| 29. | ಮಂಡ್ಯ | ಮಳವಳ್ಳಿ | ಹಲಗೂರು ಗ್ರಾಮ ಪಂಚಾಯತ್ | ಶ್ರೀ ಸುರೇಂದ್ರ ಉರುಫ್ ಸಚಿನ್, ಗ್ರಾಮ ಪಂಚಾಯತ್ ಸದಸ್ಯರು. | ಇವರು ತಮ್ಮ ಪತ್ನಿ ಹೆಸರಿನಲ್ಲಿರುವ ಶ್ರೀ ಸಚಿನ್ ಎಲೆಕ್ಟ್ರಾನಿಕ್ಸ್ ನಿಂದ ಹಲಗೂರು ಗ್ರಾಮ ಪಂಚಾಯಿತಿಗೆ ಸಾಮಗ್ರಿಗಳನ್ನು ಸರಬರಾಜು ಮಾಡಿ, ಬಿಲ್ಲಿನ ಮೊತ್ತ ರೂ. 1,28,000/-ಗಳನ್ನು ಪಡೆದಿರುವುದು. | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 43(ಎ)(v)ನ್ನು ಉಲ್ಲಂಘಿಸಿರುವ ಆರೋಪವು ಸಾಬೀತಾಗಿರುವ ಹಿನ್ನೆಲೆಯಲ್ಲಿ ಸದರಿಯವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ 1993ರ ಪ್ರಕರಣ 43(ಎ)(v) ರಡಿ ಗ್ರಾಮ ಪಂಚಾಯತ್ ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಿದೆ ಹಾಗೂ ಸದರಿ ಅಧಿನಿಯಮದ ಪ್ರಕರಣ 43-ಎ(2)ರಡಿ ಮುಂದಿನ ಆರು ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಿದೆ. | |

| | | | | | | | |
|---|---|---|---|---|---|---|---|
| 30. | ಮಂಡ್ಯ | ನಾಗಮಂಗಲ | ಚುಂಚನಹಳ್ಳಿ ಗ್ರಾಮ ಪಂಚಾಯಿತಿ | ಶ್ರೀಮತಿ ವಿಜಯಕುಮಾರಿ, ಗ್ರಾಮ ಪಂಚಾಯತ್ ಅಧ್ಯಕ್ಷರು | ಇವರ ಪತಿಯಾದ ಶ್ರೀ ದೇವರಾಜುರವರು 2021-22ನೇ ಸಾಲಿನಲ್ಲಿ 14 ಮತ್ತು 15ನೇ ಹಣಕಾಸು ಯೋಜನೆಯಡಿ ಚರಂಡಿ, ಗ್ರಾಮ ಪಂಚಾಯಿತಿ ಕಟ್ಟಡ ದುರಸ್ತಿ, ಕೊಳವೆ ಬಾವಿ ಕೊರೆಯುವ ಕಾಮಗಾರಿ, ಹೂಳು ತೆಗೆಯುವುದು, ಸಿ.ಸಿ ರಸ್ತೆ ಕಾಮಗಾರಿ ಮತ್ತು ರಾಂಪ್ ನಿರ್ಮಾಣ ಕಾಮಗಾರಿ ಒಟ್ಟು ಮೊತ್ತ ರೂ. 9,40,772/-ಗಳ ಕಾಮಗಾರಿಗಳನ್ನು ನಿರ್ವಹಿಸಿರುವುದು | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ 1993ರ ಪ್ರಕರಣ 48(ಎ)(v)ನ್ನು ಉಲ್ಲಂಘಿಸಿರುವ ಆರೋಪವು ಸಾಬೀತಾಗಿರುವ ಹಿನ್ನೆಲೆಯಲ್ಲಿ, ಸದರಿಯವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ 1993ರ ಪ್ರಕರಣ 48(4) ಮತ್ತ 48(5) ರಡಿ ಗ್ರಾಮ ಪಂಚಾಯತ್ ಅಧ್ಯಕ್ಷ ಸ್ಥಾನದಿಂದ ತೆಗೆದುಹಾಕಿದೆ ಹಾಗೂ ಸದರಿ ಅಧಿನಿಯಮದ ಪ್ರಕರಣ 43-ಎ(2)ರಡಿ ಮುಂದಿನ ಆರು ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಿದೆ. | |
| 31. | ಮಂಡ್ಯ | ಕೆ.ಆರ್ ಪೇಟೆ ತಾಲ್ಲೂಕು | ಮಾಕವಳ್ಳಿ ಗ್ರಾಮ ಪಂಚಾಯಿತಿ | ಶ್ರೀ ಬಲರಾಮೇಗೌಡ, ಮಾಜಿ ಅಧ್ಯಕ್ಷರು | ಒಂದೇ ಬಿಲ್ಲಿಗೆ ಎರಡು ಬಾರಿ ರೂ. 11,136/-ಗಳನ್ನು ಹಣ ಪಾವತಿ ಮಾಡಿ ದುರುಪಯೋಗ ಪಡಿಸಿಕೊಂಡಿರುವ ಆರೋಪ. | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ 1993ರ ಪ್ರಕರಣ 43(ಎ)(1)(v) ಹಾಗೂ ಸದರಿ ಅಧಿನಿಯಮದ ಪ್ರಕರಣ 43-ಎ(2)ರಡಿ ಮುಂದಿನ ಆರು ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಿದೆ. | |
| 32. | ಉತ್ತರ ಕನ್ನಡ ಜಿಲ್ಲೆ | ಯಲ್ಲಾಪುರ ತಾಲ್ಲೂಕು | ವಜ್ರಳ್ಳಿ ಗ್ರಾಮ ಪಂಚಾಯತ್ | ಶ್ರೀ ಗಣಪತಿ ರಾ ಭಾಗ್ವತ, ಗ್ರಾಮ ಪಂಚಾಯತ್ ಸದಸ್ಯರು | ಇವರ ಮಗನಾದ ಶ್ರೀ ರಾಮ ಗಣಪತಿ ಭಾಗ್ವತ ಇವರ ಮೂಲಕ, ಗ್ರಾಮ ಪಂಚಾಯಿತಿಯ ಅನುದಾನದಡಿ ಮೊತ್ತ ರೂ.8,21,000/-ಗಳ ಕಾಮಗಾರಿಗಳನ್ನು ನಿರ್ವಹಣೆ ಮಾಡಿರುವ ಆರೋಪ. | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ 1993ರ ಪ್ರಕರಣ 43-(ಎ) ರನ್ವಯ ಗ್ರಾಮ ಪಂಚಾಯಿತಿಯ ಸದಸ್ಯತ್ವದಿಂದ ತೆಗೆದುಹಾಕಿ, ಸದರಿ ಅಧಿನಿಯಮದ ಪ್ರಕರಣ 43-ಎ(2)ರಡಿ ಮುಂದಿನ ಆರು ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿರುವ ಆರೋಪ. | |

| | | | | | | |
|---|---|---|---|---|---|---|
| 33. | ಬೆಳಗಾವಿ ಜಿಲ್ಲೆ | ಚಿಕ್ಕೋಡಿ ತಾಲ್ಲೂಕು | ಜೈನಾಪೂರ ಗ್ರಾಮ ಪಂಚಾಯತ್ | ಶ್ರೀಮತಿ ಜಯಶ್ರೀ ಕಲ್ಲಪ್ಪ ಕಾಂಬಳೆ, ಮಾಜಿ ಅಧ್ಯಕ್ಷರು | ಒಂದೇ ಆಸ್ತಿಯಲ್ಲಿ ಎರಡು ಮನೆಗಳನ್ನು ನಿರ್ಮಿಸಿಕೊಂಡು, ರೂ. 2,84,600/-ಗಳ ಹಣ ದುರುಪಯೋಗಪಡಿಕೊಂಡಿರುವ ಆರೋಪ | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ 1993ರ ಪ್ರಕರಣ 43-(ಎ)(vi) ರಡಿ ಹಾಗೂ ಸದರಿ ಅಧಿನಿಯಮದ ಪ್ರಕರಣ 43-ಎ(2)ರನ್ವಯ ಆರು ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಿದೆ. | |
| 34. | ಬೆಳಗಾವಿ | ರಾಯಭಾಗ ತಾಲ್ಲೂಕು | ಮೇಖಳ್ಳಿ ಗ್ರಾಮ ಪಂಚಾಯತ್ | ಶ್ರೀ ವಿವೇಕ್ ಎಲ್ ಹಟ್ಟಿಕರ; ಮಾಜಿ ಅಧ್ಯಕ್ಷರು | ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿ ರೂ. 2,55,994/-ಗಳ ಹಣ ದುರುಪಯೋಗದ ಆರೋಪ. | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 43(ಎ)(v)ನ್ನು ಉಲ್ಲಂಘಿಸಿರುವ ಆರೋಪವು ಸಾಬೀತಾಗಿರುವ ಹಿನ್ನೆಲೆಯಲ್ಲಿ ಸದರಿಯವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ 1993ರ ಪ್ರಕರಣ 43(ಎ)(v) ರಡಿ ಗ್ರಾಮ ಪಂಚಾಯತ್ ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಿದೆ ಹಾಗೂ ಸದರಿ ಅಧಿನಿಯಮದ ಪ್ರಕರಣ 43-ಎ(2)ರಡಿ ಮುಂದಿನ ಆರು ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಿದೆ. | |
| 35. | ಗದಗ | ಗದಗ | ಚಿಂಚಲಿ ಗ್ರಾಮ ಪಂಚಾಯಿತಿ | ಶ್ರೀಮತಿ ದೀಪ ಬಾಯಿ ದೀವಾಕರ್ ಕುಲಕರ್ಣಿ, ಮಾಜಿ ಅಧ್ಯಕ್ಷರು ಮತ್ತು ಶ್ರೀ ಸುನೀಲ್ ಫಕೀರಪ್ಪ ಬಂಗಾರಿ, | ಕ್ರಿಯಾ ಅನುಮೋದನೆ ಇಲ್ಲದೇ ರೂ. 12,05,032/-ಗಳನ್ನು ವೆಚ್ಚ ಭರಿಸಿ, ಸರ್ಕಾರದ ಮಾರ್ಗದರ್ಶನ ಉಲ್ಲಂಘನೆ ಮತ್ತು ಶ್ರೀ ಸುನೀಲ್ ಫಕೀರಪ್ಪ ಬಂಗಾರಿ ಇವರು ತಮ್ಮ ಹೆಸರಿನಲ್ಲಿ ಪೈಪ್ ಲೈನ್ ದುರಸ್ತಿಗೆ | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ 1993ರ ಪ್ರಕರಣ 43-(ಎ)(vi) ರಡಿ ಹಾಗೂ ಸದರಿ ಅಧಿನಿಯಮದ ಪ್ರಕರಣ 43-ಎ(2)ರನ್ವಯ ಆರು ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಿದೆ. | |

| | | | | | | | |
|---|---|---|---|---|---|---|---|
| | | | | ಮಾಜಿ ಸದಸ್ಯರು | ಸಂಬಂಧಿಸಿದಂತೆ ರೂ. 41,971/- ಗಳನ್ನು ಸ್ವೀಕರಿಸಿರುವ ಆರೋಪ. | | |
| 36. | ಉತ್ತರ ಕನ್ನಡ | ಸಿದ್ದಾಪುರ ತಾಲ್ಲೂಕು | ತಂಡಾಗುಂಡಿ ಗ್ರಾಮ ಪಂಚಾಯಿತಿ | ಶ್ರೀಮತಿ ಕಲಾವತಿ ಮಹಾಬಲೇಶ್ವರ ಗೌಡ, ಮಾಜಿ ಅಧ್ಯಕ್ಷರು. | ಗ್ರಾಮ ಪಂಚಾಯಿತಿಯ ಕಾಮಗಾರಿಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ನಿರ್ವಹಿಸದೇ, ಒಟ್ಟು ರೂ. 1,12,806/-ಗಳ ದುರುಪಯೋಗಪಡಿಸಿ ಕೊಂಡಿಸಿರುವ ಆರೋಪ. | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ 1993ರ ಪ್ರಕರಣ 43-(ಎ)(vi) ರಡಿ ಹಾಗೂ ಸದರಿ ಅಧಿನಿಯಮದ ಪ್ರಕರಣ 43-ಎ(2)ರನ್ವಯ ಆರು ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಿದೆ. | |
| 37 | ಬೆಂಗಳೂರು ಗ್ರಾಮಾಂತರ | ನೆಲಮಂಗಲ | ಮರಳಕುಂಟೆ | ಪಂಚಾಯತಿ ಅಭಿವೃದ್ಧಿ ಅಧಿಕಾರಿ / ಅಧ್ಯಕ್ಷರು | ನಿಯಮಗಳ ಪಾಲನೆಯಲ್ಲಿ ಆಗಿರುವ ಲೋಪಗಳು | ಶ್ರೀಮತಿ ಧನಲಕ್ಷ್ಮಿ ಎಸ್. ಅಧ್ಯಕ್ಷರು, ಮರಳಕುಂಟೆ ಗ್ರಾಮ ಪಂಚಾಯಿತಿ ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ರನ್ವಯ ಗ್ರಾಮ ಪಂಚಾಯತಿ ಅಧ್ಯಕ್ಷ ಸ್ಥಾನದಿಂದ ಮತ್ತು ಪ್ರಕರಣ 48(5) ರನ್ವಯ ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಿದೆ ಮತ್ತು ಪ್ರಕರಣ 43--ಎ(2) ರನ್ವಯ ಯಾವುದೇ ಪಂಚಾಯತಿಗೆ ಮುಂದಿನ 6 ವರ್ಷಗಳವರೆಗೆ ಚುನಾವಣೆಗೆ ಸ್ಪರ್ಧಿಸಲು ಅನರ್ಹನಾಗತಕ್ಕದೆಂದು ಆದೇಶಿಸಿದೆ.<br><br>ಮುಂದುವರೆದು, ನಿಯಮಗಳ ಪಾಲನೆಯಲ್ಲಿ ಆಗಿರುವ ಲೋಪಗಳಿಗೆ ಸಂಬಂಧಿಸಿದಂತೆ ಮರಳಕುಂಟೆ ಗ್ರಾಮ ಪಂಚಾಯತಿಯ ಆಂದಿನ ಸಂಬಂಧಿತ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಮೇಲೆ ಕರ್ನಾಟಕ ಸಿವಿಲ್ ಸೇವಾ (ಸಿಸಿಎ) ನಿಯಮಗಳು, 1957 ರನ್ವಯ ಇಲಾಖಾ ವಿಚಾರಣೆಯನ್ನು ನಡೆಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರಿಗೆ ಕ್ರಮ ಕೈಗೊಳ್ಳುವಂತೆ ಆದೇಶಿಸಿದೆ. | - |
| 38 | ಬೆಂಗಳೂರು | ದೇವನಹ | ವಿಶ್ವನಾಥಪು | ಪಂಚಾಯತಿ | ಬೆಂಗಳೂರು ಗ್ರಾಮಾಂತರ | ಶ್ರೀ ರಾಮಮೂರ್ತಿ, ಹಿಂದಿನ ಅಧ್ಯಕ್ಷರು, | |

| | | | | | | | |
|---|---|---|---|---|---|---|---|
| | ಗ್ರಾಮಾಂತರ | ಳ್ಳಿ | ರ | ಅಭಿವೃದ್ಧಿ ಅಧಿಕಾರಿ / ಅಧ್ಯಕ್ಷರು | ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ವಿಶ್ವನಾಥಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿಟ್ಟ ನಿವೇಶನದ 4414 ಚ.ಮೀ ಪ್ರದೇಶವನ್ನು ಕ್ಲಬ್ ಹೌಸ್ ನಿರ್ಮಾಣಕ್ಕಾಗಿ ಗುತ್ತಿಗೆ ಆಧಾರದ ಮೇಲೆ ಮೆ: ಫೋರ್ಟಿಯಸ್ ಲ್ಯಾಂಡ್ ಡೆವಲಪರ್ಸ್ ಎಲ್.ಎಲ್.ಪಿ ಎಂಬ ಖಾಸಗಿ ಸಂಸ್ಥೆಗೆ ನೀಡುವುದರ ಮೂಲಕ ತಮ್ಮ ಅಧಿಕಾರ ದುರ್ಬಳಕೆ ಮತ್ತು ನಿಯಮಗಳ ಉಲ್ಲಂಘನೆ ಮಾಡಿ, ದುರ್ನಡತೆ ಎಸಗಿರುವುದು | ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) (2) ರನ್ವಯ ಮುಂದಿನ 6 ವರ್ಷಗಳ ಅವಧಿಗೆ ಪಂಚಾಯತ್ ಸದಸ್ಯತ್ವ ಸ್ಥಾನಕ್ಕೆ ಸ್ಪರ್ಧಿಸದಂತೆ ಅನರ್ಹಗೊಳಿಸಿ ಆದೇಶಿಸಿದೆ. | |
| 39 | ಚಿಕ್ಕಬಳ್ಳಾಪುರ | ಗುಡಿಬಂಡೆ | ಸೋಮೇನಹಳ್ಳಿ | ಅಧ್ಯಕ್ಷರು | ಸೋಮೇನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಇವರ ಪತಿಯಾದ ಶ್ರೀ ಎನ್. ಗಂಗಾಧರ, ಮಾವನವರಾದ ಶ್ರೀ ನಂಜಪ್ಪ, ಶ್ರೀ ಎನ್. ಗಂಗಾಧರರವರ ಚಿಕ್ಕಪ್ಪನವರ ಮಗನಾದ ಶ್ರೀ ಬಾಲಕೃಷ್ಣರವರ ಹೆಸರಿಗೆ ಗ್ರಾಮ ಪಂಚಾಯಿತಿ ನಿಧಿ-1 ರಿಂದ ವಿವಿಧ ವೆಚ್ಚಗಳಿಗೆ ಸಂಬಂಧಿಸಿದಂತೆ ಕಾನೂನು ಉಲ್ಲಂಘನೆ ಮಾಡಿ ರೂ.1,20,000/- ಗಳನ್ನು ಪಾವತಿ ಮಾಡಿರುತ್ತಾರೆ ಹಾಗೂ 15ನೇ ಹಣಕಾಸು, ನರೇಗಾ ಯೋಜನೆಯಡಿಯಲ್ಲಿ | ಶ್ರೀಮತಿ ಕೆ.ಎನ್. ಸರಳ, ಹಿಂದಿನ ಅಧ್ಯಕ್ಷರು ಹಾಲಿ ಸದಸ್ಯರು, ಇವರ ವಿರುದ್ಧ ಸಾಬೀತಾದ ಆರೋಪಗಳಿಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) (vi) ರನ್ವಯ ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಿದೆ ಮತ್ತು ಪ್ರಕರಣ 43(ಎ)(2)ರನ್ವಯ ಮುಂದಿನ 06 ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಿದೆ. | |

| | | | | | | | |
|---|---|---|---|---|---|---|---|
| | | | | | ಕೆಲಸ ಮಾಡದೇ ಕಳಪೆ ಕಾಮಗಾರಿಗಳನ್ನು ಮಾಡಿಸಿ, ಹಣ ದುರುಪಯೋಗ ಮಾಡಿಕೊಂಡಿರುವುದು. | | |
| 40 | ಬೆಂಗಳೂರು ಗ್ರಾಮಾಂತರ | ಹೊಸಕೋಟೆ | ಬೈಲನರಸಾಪುರ | ಪಂಚಾಯತಿ ಅಭಿವೃದ್ಧಿ ಅಧಿಕಾರಿ / ಅಧ್ಯಕ್ಷರು | ಬೈಲನರಸಾಪುರ ಗ್ರಾಮ ಪಂಚಾಯತಿಯಲ್ಲಿ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿರುವಾಗ ಅವ್ಯವಹಾರ ಮತ್ತು ಹಣ ದುರುಪಯೋಗ ಮಾಡಿರುವ ಆರೋಪ. | ಶ್ರೀಮತಿ ಕವಿತಾ, ಮಾಜಿ ಅಧ್ಯಕ್ಷರು, ಇವರು ಅವರ ಪತಿಯಾದ ಶ್ರೀ ಹೆಚ್. ಎನ್. ರಮೇಶ್ ರವರಿಗೆ ಕಾಮಗಾರಿಗಳನ್ನು ನೀಡಿರುವುದು ಮತ್ತು ಈ ಸಂಬಂಧ ಹಣವನ್ನು ಪಾವತಿಸಿ ಅಧಿಕಾರ ದುರುಪಯೋಗಪಡಿಸಿಕೊಂಡಿರುವುದರಿಂದ, ಶ್ರೀಮತಿ ಕವಿತಾ, ಇವರು ಪ್ರಸ್ತುತ ಬೈಲನರಸಾಪುರ ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರಾಗಿರುವುದಿಲ್ಲ. ಮಾಜಿ ಅಧ್ಯಕ್ಷರು ಹಾಗೂ ಸದಸ್ಯರಾಗಿರುವುದರಿಂದ ಸದರಿಯವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) (೧) (vi) ರಡಿ ಮತ್ತು 43(ಎ) (2) ರನ್ವಯ ಮುಂದಿನ 6 ವರ್ಷಗಳ ಅವಧಿಗೆ ಪಂಚಾಯತ್ ಸದಸ್ಯತ್ವ ಸ್ಥಾನಕ್ಕೆ ಸ್ಪರ್ಧಿಸದಂತೆ ಅನರ್ಹಗೊಳಿಸಿ ಆದೇಶಿಸಿದೆ. | |
| 41 | ಬೆಂಗಳೂರು ನಗರ | ಬೆಂಗಳೂರು ದಕ್ಷಿಣ | ಹೆಚ್.ಗೊಲ್ಲಹಳ್ಳಿ ಗ್ರಾಮ ಪಂಚಾಯತಿ | ಅಧ್ಯಕ್ಷರು | ಶ್ರೀಮತಿ ಭಾಗ್ಯಮ್ಮ ಬಿ.ಎನ್. ಅಧ್ಯಕ್ಷರು, ಹೆಚ್.ಗೊಲ್ಲಹಳ್ಳಿ ಗ್ರಾಮ ಪಂಚಾಯತಿ ಬೆಂಗಳೂರು ದಕ್ಷಿಣ | ಶ್ರೀಮತಿ ಭಾಗ್ಯಮ್ಮ ಬಿ.ಎನ್. , ಅಧ್ಯಕ್ಷರು, ಅಧಿಕಾರ ದುರುಪಯೋಗಪಡಿಸಿಕೊಂಡು ದುರ್ನಡತೆ ಮಾಡಿರುವುದು ಕಂಡು ಬಂದಿರುವುದರಿಂದ | |

| | | | | | | | |
|---|---|---|---|---|---|---|---|
| | | | | | ತಾಲ್ಲೂಕು ಇವರ ಪತಿ ಅಧ್ಯಕ್ಷರ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡಿರುವುದು | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ರನ್ವಯ ಗ್ರಾಮ ಪಂಚಾಯತಿ ಅಧ್ಯಕ್ಷ ಸ್ಥಾನದಿಂದ ಮತ್ತು 48(5) ರನ್ವಯ ಗ್ರಾಮ ಪಂಚಾಯತಿ ಸದಸ್ಯತ್ವ ಸ್ಥಾನದಿಂದ ತೆಗೆದುಹಾಕಿದೆ ಮತ್ತು ಪ್ರಕರಣ 43-ಎ(2) ರನ್ವಯ ಯಾವುದೇ ಪಂಚಾಯತಿಗೆ ಮುಂದಿನ 6 ವರ್ಷಗಳವರೆಗೆ ಚುನಾವಣೆಗೆ ಸ್ಪರ್ಧಿಸಲು ಅನರ್ಹನಾಗತಕ್ಕದ್ದೆಂದು ಆದೇಶಿಸಿದೆ. | |

| | | | | | | | |
|---|---|---|---|---|---|---|---|
| 42 | ಬೆಂಗಳೂರು ಗ್ರಾಮಾಂತರ | ನೆಲಮಂಗಲ | ಬೂದಿಹಾಲ್ | ಅಧ್ಯಕ್ಷರು | ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು ಬೂದಿಹಾಲ್ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಶೈಲಜಾ.ಹೆಚ್. ಇವರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಪ್ರಾಥಮಿಕ ಶಾಲೆ ಮತ್ತು ಅಂಗನವಾಡಿ ಕೇಂದ್ರದ ಶಾಲೆಗಳಿಗೆ ಸ್ವಾತಂತ್ರ್ಯ ದಿನಾಚರಣೆಯ ಆಚರಣೆಗಾಗಿ ಸಿಹಿ/ತಿಂಡಿ ವಿತರಿಸಲು ಚೆಕ್ ನಂ.974048 ಮುಖೇನ ಅಧ್ಯಕ್ಷರ ಪತಿಯ ತಂದೆಯವರಾದ ಮೇಲಯ್ಯರವರ ಹೆಸರಿಗೆ ಪಾವತಿಸಿ, ಚೆಕ್ ದುರುಪಯೋಗವಾಗಿರುವುದು. | ಶ್ರೀಮತಿ ಶೈಲಜಾ ಹೆಚ್, ಅಧ್ಯಕ್ಷರು, ಅಧಿಕಾರ ದುರುಪಯೋಗಪಡಿಸಿಕೊಂಡು ದುರ್ನಡತೆ ಮಾಡಿರುವುದು ಕಂಡುಬಂದಿರುವದರಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ರನ್ವಯ ಗ್ರಾಮ ಪಂಚಾಯತಿ ಅಧ್ಯಕ್ಷ ಸ್ಥಾನದಿಂದ ಮತ್ತು 48(5) ರನ್ವಯ ಗ್ರಾಮ ಪಂಚಾಯತಿ ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಿದೆ ಮತ್ತು ಪ್ರಕರಣ 43-ಎ(2) ರನ್ವಯ ಯಾವುದೇ ಪಂಚಾಯತಿಗೆ ಮುಂದಿನ 6 ವರ್ಷಗಳವರೆಗೆ ಚುನಾವಣೆಗೆ ಸ್ಪರ್ಧಿಸಲು ಅನರ್ಹನಾಗತಕ್ಕದ್ದೆಂದು ಆದೇಶಿಸಿದೆ. | |

| | | | | | | | | |
|---|---|---|---|---|---|---|---|---|
| 43 | ಬೆಂಗಳೂರು ನಗರ | ಬೆಂಗಳೂರು ಪೂರ್ವ ತಾಲ್ಲೂಕು | ಕಣ್ಣೂರು | ಸದಸ್ಯರು | | ಶ್ರೀ ದೊಡ್ಡಣ್ಣ ಬಿನ್ ಚಿಕ್ಕಪ್ಪಯ್ಯ, ಸದಸ್ಯರು, ಕಣ್ಣೂರು ಗ್ರಾಮ ಪಂಚಾಯತಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ರವರು ಖಾಸಗಿ ಜಮೀನಿನಲ್ಲಿ ಕೊರೆಯಿಸಲಾಗಿರುವ ಬೋರ್‌ವೆಲ್‌ಗೆ ಗ್ರಾಮ ಪಂಚಾಯತಿ ವತಿಯಿಂದ ಆರ್.ಆರ್. ನಂ. 4667 ರ ಮೀಟರ್ ಮುಖೇನ ಅನಧಿಕೃತವಾಗಿ ವಿದ್ಯುಚ್ಛಕ್ತಿ ಸಂಪರ್ಕವನ್ನು ಪಡೆದುಕೊಂಡಿರುವುದು | ಶ್ರೀ ಸಿ. ದೊಡ್ಡಣ್ಣ, ಸದಸ್ಯರು ಇವರನ್ನು ಕಣ್ಣೂರು ಗ್ರಾಮ ಪಂಚಾಯಿತಿ ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಿ 6 ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ, ಆದೇಶಿಸಲಾಗಿದೆ. | |